# ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 ಸಂಚಿಕೆ 42 ಅಕ್ಟೋಬರ್ 18, 1981 ಬೆಲೆ : 60 ಪೈಸೆ


## ಸಂಪಾದಕೀಯ

# ಯಾದವೀಕಲಹ

ದೀರ್ಘಕಾಲದ ಮೌನದ ನಂತರ ಪ್ರದೇಶ ಇಂದಿರಾ ಕಾಂಗ್ರೆಸ್ ಅಧ್ಯಕ್ಷ ಕೆ. ಟಿ. ರಾಠೋಡ್ ಅವರು ಹಲವು ಗಡುಸಿನ ಕ್ರಮಗಳನ್ನು ಪ್ರಕಟಿಸುವುದರೊಂದಿಗೆ ರಾಜ್ಯದ ಕಾಂಗ್ರೆಯಲ್ಲಿನ ಒಳಜಗಳವು ಯಾವ ಹಂತಕ್ಕೆ ತಲುಪಿದೆ ಎಂಬುದು ಸ್ಪಷ್ಟವಾಗಿದೆ. ಪ್ರದೇಶ ಇಂದಿರಾ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷ ಹಾಗೂ ಇಂದಿನ ಭಿನ್ನಮತೀಯ ನಾಯಕ ಎಸ್. ಬಂಗಾರಪ್ಪ ಮತ್ತು ಬಿಜಾಪುರದ ಲೋಕಸಭೆ ಸದಸ್ಯ ಹಾಗೂ ಬಿಜಾಪುರ ಡಿ. ಸಿ. ಸಿ. (ಐ)ಯ ಅಧ್ಯಕ್ಷರಾದ ಕೆ. ಬಿ. ಚೌಧರಿಯವರಿಗೆ ಕೆ. ಟಿ. ರಾಠೋಡ್ ಅವರು ಷೋಕಾಸ್ ನೋಟೀಸನ್ನು ಕೊಟ್ಟು ಪಕ್ಷದ ಹಾಗೂ ಪಕ್ಷದ ಸರ್ಕಾರದ ವಿರೋಧೀ ಚಟುವಟಿಕೆಗಳಿಗೆ ಉತ್ತೇಜನ ನೀಡಿದ್ದಕ್ಕಾಗಿ ಅವರ ಮೇಲೆ ಏಕೆ ಶಿಸ್ತಿನ ಕ್ರಮ ತೆಗೆದುಕೊಳ್ಳಬಾರದು ಎಂದು ಕೇಳಲಾಗಿದೆ.

ದೆಹಲಿಗೆ ಕರ್ನಾಟಕ ಕಾಂಗ್ರೆಸ್ (ಐ) ಕಾರ್ಯಕರ್ತರ ಕ್ರಿಯಾ ಸಮಿತಿ ಎನಿಸಿಕೊಂಡ ಸಂಸ್ಥೆಯ ಇನ್ನೂರಕ್ಕೂ ಹೆಚ್ಚು ಜನರ ಯಾತ್ರೆ, ಅಲ್ಲಿ ಅವರು ರಾಜ್ಯದ ಕಾಂಗ್ರೆ ಸರಕಾರದ ವಿರುದ್ಧ ಹಂಚಿರುವ ಮನವಿ ಪತ್ರಗಳು, ಕೊಟ್ಟಿರುವ, ಹೇಳಿಕೆಗಳು ಇವಕ್ಕೆಲ್ಲಾ ಬಂಗಾರಪ್ಪ ಮತ್ತು ಅವರ ಗೆಳೆಯರೇ ಬೆಂಬಲಿಗರು ಎಂಬ ಕಾರಣದಿಂದಲೂ, ತನಗೂ ಮುಖ್ಯಮಂತ್ರಿ ಗುಂಡೂರಾವ್ ಅವರಿಗೂ ವಿರಸವಿಲ್ಲ ಎಂಬುದನ್ನು ತೋರಿಸುವುದಕ್ಕಾಗಿಯೂ ರಾಠೋಡ್ ಅವರು ತರಾತುರಿಯಿಂದ ಗಡುಸಿನ ಕ್ರಮಗಳನ್ನು ತೆಗೆದುಕೊಂಡಂತೆ ಕಾಣುತ್ತದೆ. ಇಂದಿರಾ ಕಾಂಗ್ರೆಸ್ ಕಾರ್ಯಕರ್ತರ ಕ್ರಿಯಾ ಸಮಿತಿಯ ಪ್ರಮುಖರೆನ್ನಲಾದ ಬಿ. ಎಂ. ಕದಂ, ಐ. ರೆಡ್ಡಿ ಮೊದಲಾದವರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ. ಕೇಂದ್ರ ರೈಲ್ವೆ ಮಂತ್ರಿ ಸಿ. ಕೆ. ಜಾಫರ ಷರೀಫ್ ಅವರು ನವದೆಹಲಿಗೆ ಹೋದ ಕಾರ್ಯಕರ್ತರ ತಂಡಕ್ಕೆ ರೈಲ್ವೆ ಬೋಗಿಯೊಂದನ್ನು ಒದಗಿಸಿದ್ದಕ್ಕಾಗಿ ಷರೀಫ್ ಅವರಿಗೂ ರಾಠೋಡ್ ಪತ್ರ ಬರೆದಿರುವರು.

ಪ್ರದೇಶ ಇಂದಿರಾ ಕಾಂಗ್ರೆಸ್ಸಿನ ಜಿಲ್ಲಾ ಸಮಿತಿಗಳ ಪುನರ್ರಚನೆಯನ್ನು ದಿಢೀರನೆ ಮುಂದಕ್ಕೆ ಹಾಕಲಾಗಿದೆ. ಜಿಲ್ಲಾ ಸಮಿತಿಗಳ ಪುನರ್ರಚನೆಯ ವಿಚಾರದಲ್ಲಿ ಮುಖ್ಯಮಂತ್ರಿ ಗುಂಡೂರಾವ್ ಮತ್ತು ರಾಠೋಡ್ ಅವರೊಳಗೆ ಭಿನ್ನಾಭಿಪ್ರಾಯವುಂಟಾಗಿದ್ದ ಸುದ್ದಿಯೂ ಇದೆ. ಅದನ್ನು ಸರಿಪಡಿಸಿಕೊಳ್ಳುವಂತೆ ಹೈಕಮಾಂಡು ಸಲಹೆ ಮಾಡಿದ್ದ ವದಂತಿಯೂ ಇದೆ.

ರಾಜ್ಯದ ಕಾಂಗ್ರೆಯಲ್ಲಿರುವ ಯಾದವೀ ಕಲಹವು ಅದೇನು ಹೊಸತಲ್ಲ. ಕೇವಲ ಈ ರಾಜ್ಯಕ್ಕೇ ಸೀಮಿತವಾಗಿಯೂ ಇಲ್ಲ. ಆಂಧ್ರದಲ್ಲಿ ಇತ್ತೀಚೆಗೆ ಇಬ್ಬರು ಸಚಿವರುಗಳನ್ನು ಪಕ್ಷದಿಂದ ಅವಮಾನಗೊಳಿಸಿ ಮತ್ತೆ ಹಿಂದೆ ತೆಗೆದುಕೊಂಡುದು, ಮಹಾರಾಷ್ಟ್ರದಲ್ಲಿ ಭ್ರಷ್ಟ ಅಂತುಳೆಯ ಪರವಾಗಿರುವವರು ಮತ್ತು ಭಿನ್ನಮತೀಯರೊಳಗಿನ ತಿಕ್ಕಾಟ, ಪಂಜಾಬಿ

[ಕಡೇ ಪುಟ ನೋಡಿ]

### 13,000 ಚಿನ್ನದ ಗಣಿ ಕಾರ್ಮಿಕರ

# ವೇತನ ಒಪ್ಪಂದ

ಕೆ.ಜಿ.ಎಫ್.ನ 13000 ಚಿನ್ನದ ಗಣಿ ಕಾರ್ಮಿಕರ ವೇತನ ಒಪ್ಪಂದಕ್ಕೆ 12-10-81ರಂದು ಕೆ.ಜಿ.ಎಫ್.ನಲ್ಲಿ ಅಂಕಿತ ಹಾಕಲಾಯಿತು. ಈ ಒಪ್ಪಂದದಿಂದ ಕಂಪನಿಗೆ ವಾರ್ಷಿಕ ಹೆಚ್ಚುವರಿ ಖರ್ಚು 1 ಕೋಟಿ 60ಲಕ್ಷರೂ.ಗಳಷ್ಟು ತಗಲುವದು. ಅಂದರೆ ಪ್ರತಿ ಕಾರ್ಮಿಕನ ಸಂಬಳದಲ್ಲಿ ಶೇ. 18ರಷ್ಟು ಹೆಚ್ಚಳವಾಗಿದೆ.

ಚಿನ್ನದ ಗಣಿ ಕಾರ್ಮಿಕರು ತಮ್ಮ ನ್ಯಾಯಯುತ ಬೇಡಿಕೆಗಳ ಇತ್ಯರ್ಥಕ್ಕೋಸ್ಕರ ಒಂದು ದಿನದ ಮುಷ್ಕರ ಹೂಡಿದ್ದರು. ಸರದಿ ಉಪವಾಸ ಸತ್ಯಾಗ್ರಹವೂ ನಡೆದಿತ್ತು. ಸಂಘದ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್ ಅವರು ಈ ಕುರಿತು ಎರಡು ಸಲ ದೆಹಲಿಗೆ ತೆರಳಿ ಕೇಂದ್ರ ಮಂತ್ರಿಗಳೊಂದಿಗೆ ಚರ್ಚಿಸಿದ್ದರು.

### ಒಪ್ಪಂದದ ಮುಖ್ಯ ಅಂಶಗಳು

1) ಪ್ರತಿ ಕಾರ್ಮಿಕನಿಗೆ 55ರೂ.ನಿಂದ ಹಿಡಿದು 160ರೂ.ಗಳವರೆಗೆ ಸಂಬಳದಲ್ಲಿ ಹೆಚ್ಚಳವಾಗಿದೆ.

2) 100ವರ್ಷಗಳ ಚಿನ್ನದ ಗಣಿಯ ಚರಿತ್ರೆಯಲ್ಲಿ ಮೊದಲಬಾರಿಗೆ ಗಣಿಯೊಳಗೆ (under ground) ಕೆಲಸ ಮಾಡುವ ಕಾರ್ಮಿಕರ ಅವರವರ ಸಂಬಳದ ಶೇ. 15ರಷ್ಟು ಅಲವೆನ್ಸ್ (under ground allowance) ದೊರೆಯಲಿದೆ.

3) ಎರಡು ವರ್ಷಕ್ಕೊಮ್ಮೆ 160ರೂ. ಎಲ್.ಟಿ.ಎ. ದೊರೆಯಲಿದ್ದು ಇದಕ್ಕೆ ಯಾವ ದಾಖಲಾತಿಯನ್ನೂ ಹಾಜರುಪಡಿಸುವ ಅವಶ್ಯಕತೆಯಿಲ್ಲ.

4) 12ವರ್ಷ ಕೆಲಸ ಮಾಡಿದ ಎಫ್ ಗ್ರೇಡ್ ಕಾರ್ಮಿಕನಿಗೆ ಹೊಸ ಸಂಬಳ ಶ್ರೇಣಿ ದೊರೆಯಲಿದೆ.

5) ಯಾವ ಕಾರ್ಮಿಕನಿಗೂ ಈ ಒಪ್ಪಂದದ ಅವಧಿಯಲ್ಲಿ ಬಡ್ತಿ ನಿರಾಕರಣೆಯಾಗುವದಿಲ್ಲ.

6) 200ರೂ. ಮೂಲಸಂಬಳ ಇದ್ದ ಸಂಬಳ ದರ್ಜೆಗಳು 300ರೂ.ಗಳಿಂದ ಪ್ರಾರಂಭವಾಗಿ ಪ್ರತಿ ಶ್ರೇಣಿಗೂ ಬಡ್ತಿದರ 2ರೂ. ಹೆಚ್ಚುತ್ತದೆ.

ಈ ಒಪ್ಪಂದದ ಪ್ರಕಾರ ಗಣಿಯೊಳಗೆ ಕೆಲಸ ಮಾಡುವ ಕುಶಲ (Skilled) ಕೆಲಸಗಾರರಿಗೆ ಕನಿಷ್ಟ 565ರೂ. ಹಾಗೂ ಹೊರಗೆ ಕೆಲಸ ಮಾಡುವ ಅರೆಕುಶಲ (unskilled) ಕೆಲಸಗಾರರಿಗೆ ಕನಿಷ್ಟ 520ರೂ. ದೊರೆಯಲಿದೆ.

ಈ ಒಪ್ಪಂದದ ಸೌಲಭ್ಯಗಳು 1-1-81ರಿಂದಲೇ ಕಾರ್ಮಿಕರಿಗೆ ದೊರೆಯಲಿವೆ. ಅರಿಯರ್ಸ್ ಆಗಿ ತಲಾ 500ರೂ.ಗಳಿಂದ ಹಿಡಿದು 2000ರೂ.ಗಳವರೆಗೆ ದೊರೆಯಲಿದೆ.

ಈ ಒಪ್ಪಂದಕ್ಕೆ ಕಾರ್ಮಿಕರ ಪರವಾಗಿ ಕಾಂ. ಸೂರ್ಯನಾರಾಯಣರಾವ್, ಸಮರೀದಾಸ್, ಟಿ. ಎಸ್. ಮಣಿ, ಕಣ್ಣನ್, ಮುತ್ತುಕುಮಾರ ಮತ್ತು ಕಾಂ. ಪ್ಯಾಟ್ರಿಕ್ ಅಂಕಿತ ಹಾಕಿದ್ದಾರೆ. ಆಡಳಿತವರ್ಗದ ಪರವಾಗಿ ಶ್ರೀರಾವ್, ಮೆನನ್ ಮತ್ತು ಶ್ರೀ ಜಯರಾಮ ಇವರುಗಳು ಅಂಕಿತ ಹಾಕಿದ್ದಾರೆ.

○

### ಪೋಲೀಸರಿಂದ ಕಿರಾತ ನೃತ್ಯ

# ದಾಂಡೇಲಿಯಲ್ಲಿ ಗೋಲಿಬಾರ್, ಲಾಠೀಚಾರ್ಜ್

ಕನಿಷ್ಠ ಕೂಲಿ ಜಾರಿಗೊಳಿಸುವಂತೆ ಹೈಕೋರ್ಟ್ ಕೊಟ್ಟ ತೀರ್ಪನ್ನು ಆಧರಿಸಿ ತಮಗೆ ಬರಬೇಕಾದ ಕೂಲಿಗಾಗಿ ಹೋರಾಡುತ್ತಿದ್ದ ದಾಂಡೇಲಿಯ ಪ್ಲೈವುಡ್ ಕಾರ್ಖಾನೆಯ ಕಾರ್ಮಿಕರ ಮೇಲೆ ಪೋಲೀಸರು ಗುಂಡುಹಾರಿಸಿದ್ದಾರೆ, ಲಾಠೀಚಾರ್ಜು ಮಾಡಿದ್ದಾರೆ, ಅಶ್ರುವಾಯು ಪ್ರಯೋಗಿಸಿದ್ದಾರೆ.

ದಾಂಡೇಲಿಯಲ್ಲಿ ಪೋಲೀಸರು ಕಾರ್ಮಿಕರ ಕಾಲೋನಿಗಳಿಗೆ ನುಗ್ಗಿ ಪೈಶಾಚಿಕ ದಬ್ಬಾಳಿಕೆ ನಡೆಸಿದ್ದಾರೆ. ಈ ಬರ್ಬರ ಕೃತ್ಯದ ಪೌರೋಹಿತ್ಯವನ್ನು ಡಿಐಜಿ ಚಂದೂಲಾಲ್ ಮತ್ತು ಕಾರವಾರ ಎಸ್.ಪಿ. ಪಾವಟೆ ಎಂಬಿಬ್ಬ ರಾಕ್ಷಸರು ವಹಿಸಿಕೊಂಡಿದ್ದಾರೆ. ಈ ಮಹಾನುಭಾವರು ದಾಂಡೇಲಿಯಲ್ಲೇ ಬೀಡಾರ ಹೂಡಿದ್ದಾರೆ.

ಬಡಪಾಯಿ ಕಾರ್ಮಿಕರು ತಮ್ಮ ಕೂಲಿಗೋಸ್ಕರ ಹೋರಾಡುತ್ತಿದ್ದಾರೆ ವಿನಃ ಸರಕಾರದ ಮೇಲೆ ಬಂಡಾಯ ಹೂಡಿಲ್ಲ. ಆಡಳಿತವರ್ಗದ ದೌರ್ಜನ್ಯ ಪ್ರತಿಭಟಿಸುತ್ತಿದ್ದಾರೆ ವಿನಃ ಪೋಲೀಸರ ಮೇಲೆ ಯುದ್ಧ ಹೂಡಿಲ್ಲ. ಯಾವುದೇ ಪ್ರಚೋದನೆ ಇಲ್ಲದೇ, ಕಾರಣವಿಲ್ಲದೇ ಪೋಲೀಸರು ಗೋಲೀಬಾರ್ ನಡೆಸಿದ್ದಾರೆ. ಅಮಾನುಷ ಲಾಠೀ ಏಟುಗಳಿಂದಾಗಿ ನೂರಾರು ಜನ ಗಾಯಗೊಂಡಿದ್ದಾರೆ. ನೂರಕ್ಕೂ ಮಿಕ್ಕಿ ಸಕ್ರಿಯ ಕಾರ್ಯಕರ್ತರನ್ನು ಬಂಧಿಸಲಾಗಿದೆ. ಕಾರ್ಮಿಕ ನಾಯಕ, ಸಿ. ಐ. ಟಿ. ಯು. ರಾಜ್ಯಸಮಿತಿಯ ಉಪಾಧ್ಯಕ್ಷ ಕಾಂ. ಆರ್. ಜಿ. ಸ್ಥಳೇಕರರನ್ನು ಬಂಧಿಸಿದ್ದೇ ಅಲ್ಲದೇ ಅವರನ್ನು ಪೋಲೀಸ್ ಠಾಣೆಯೊಳಗೆ ಅಮಾನುಷವಾಗಿ ಥಳಿಸಿದ್ದಾರೆ. ಈ ಪವಿತ್ರ ದೇಶದಲ್ಲಿ ನ್ಯಾಯಕ್ಕೋಸ್ಕರ, ಹಕ್ಕಿಗೋಸ್ಕರ, ಒಳ್ಳೆಯ ಬದುಕಿಗೋಸ್ಕರ ಹೋರಾಡುತ್ತಿರುವವರಿಗೆ ದೊರೆಯುತ್ತಿರುವ ಪುರಸ್ಕಾರವಿದು.

### ಹಿನ್ನೆಲೆ

ದಾಂಡೇಲಿಯ ಪ್ಲೈವುಡ್ ಕಾರ್ಖಾನೆಯ ಕಾರ್ಮಿಕರಿಗೆ ಸರಿಯಾದ ಸಂಘಟನೆಯೊಂದಿರಲಿಲ್ಲ. ಈ ಕುರಿತು ನಡೆಯುತ್ತಿದ್ದ ಪ್ರಯತ್ನಗಳನ್ನು ಆಡಳಿತವರ್ಗದ ದುಷ್ಟ ಕೈಗಳು ಮೊಳಕೆಯಲ್ಲೇ ಹೊಸಕಿಹಾಕುತ್ತಿದ್ದವು. ಆಡಳಿತವರ್ಗ ತಮ್ಮ ಅನುಕೂಲಕ್ಕಾಗಿ ಕುಟ್ಟಿ ಎಂಬೊಬ್ಬನ ನೇತೃತ್ವದ ಬಾಲಬಡುಕ ಸಂಘವನ್ನು ಪ್ರೋತ್ಸಾಹಿಸುತ್ತಿದ್ದುದೇ ಅಲ್ಲದೇ ತನ್ನ ಬೇಳೆ ಬೇಯಿಸಿಕೊಳ್ಳುತ್ತಿತ್ತು.

ದಾಂಡೇಲಿ ಮತ್ತು ಬಿಣಗಾ ಮುಂತಾದ ಕಡೆಗಳಲ್ಲಿರುವ ಹೆಚ್ಚಿನಂಶ ಕಾರ್ಖಾನೆಗಳಲ್ಲಿ ಸಿ. ಐ. ಟಿ. ಯು. ಅಸ್ತಿತ್ವದಲ್ಲಿದೆ. ಈ ಕೆಲವು ಕಾರ್ಖಾನೆಗಳ ಕಾರ್ಮಿಕರು ಅನೇಕ ಧೀರೋದಾತ್ತ ಹೋರಾಟಗಳನ್ನು ನಡೆಸಿ ಗೆಲುವು ಪಡೆದಿದ್ದಾರೆ. ರಾಜಕೀಯ ಹೋರಾಟದಲ್ಲೂ ಈ ಪ್ರದೇಶದ ಕಾರ್ಮಿಕರು ಸಕ್ರಿಯಪಾತ್ರ ವಹಿಸುತ್ತಿದ್ದಾರೆ.

ಪ್ಲೈವುಡ್ ಕಾರ್ಖಾನೆಯಲ್ಲಿಮಾತ್ರ ಸಂಘಟನೆ ಬೇರುಬಿಟ್ಟಿರಲಿಲ್ಲ. ಇತ್ತೀಚೆಗೆ ಸಂಘಟನೆಯ ಪ್ರಯತ್ನಗಳು ಪ್ರಾರಂಭವಾಗಿದ್ದವು.

1-9-81ರಂದು ಕನಿಷ್ಟ ಕೂಲಿಗೆ ಒತ್ತಾಯಿಸುತ್ತಿದ್ದ ಕಾರ್ಮಿಕರಿಗೆ 35 ರೂ. ಬಕ್ಷೀಸು ಕೊಡುವುದಾಗಿ ಆಡಳಿತವರ್ಗ ಪ್ರಕಟಿಸಿತು. ರೋಸಿಹೋಗಿದ್ದ ಕಾರ್ಮಿಕರು ಈ ಬಕ್ಷೀಸ(?)ನ್ನು ನಿರಾಕರಿಸಿದರು. ಇಬ್ಬರು

[ಕಡೇ ಪುಟ ನೋಡಿ]

# ಭೂನ್ಯಾಯಮಂಡಳಿಗಳು ಏನುಮಾಡುತ್ತಿವೆ?

-ಕೆ. ವಿ. ರಾವ್, ಉಜಿರೆ

ಭೂನ್ಯಾಯ ಮಂಡಳಿಗಳ ಸಂಖ್ಯೆ ಇತ್ತೀಚೆಗೆ ನಾಲ್ಕು ಪಟ್ಟಾದರೂ ಏರಿದೆ? ಪ್ರತಿ ತಾಲ್ಲೂಕಿನಲ್ಲಿ ಮೂರು, ನಾಲ್ಕು, ಆರು ಎಂದರೂ ಸರಿಯೇ. ಅಷ್ಟೇ ಪಾಲು ಸದಸ್ಯರೂ ಹೆಚ್ಚಾಗಿದ್ದಾರೆ. ಅಧ್ಯಕ್ಷರ ನೇಮಕಗಳೂ ಆಗಿವೆ. ಸರಕಾರಕ್ಕೆ ವ್ಯರ್ಥ ಖರ್ಚು ಅಷ್ಟೇ. ಆದರೆ ಈ ನ್ಯಾಯ ಮಂಡಳಿಗಳು ಏನನ್ನು ಮಾಡುತ್ತಿವೆ? ಏನು ಭೂಮಿ ಕೊಡುತ್ತಿವೆ? ಅವುಗಳ ಕಾರ್ಯವ್ಯಾಪ್ತಿಯೇನು ಎಂದರೆ ಅದೊಂದು ತಮಾಷೆ.

ಆ ಹಿರಿಯ ಅಸಿಸ್ಟೆಂಟ್ ಕಮೀಶನರ್ ಹಣೆಯ ಬೆವರು ಒರೆಸಿಕೊಳ್ಳುತ್ತಾ ಹೇಳಿದರು 'ದಿನಾ ಮೂವತ್ತು ಮೊಕದ್ದಮೆಗಳನ್ನಾದರೂ ಮುಗಿಸಬೇಕು ನಾವು. ಎಷ್ಟು ವಿಚಾರ ಏನು ಸಾಚಾರ? ಸಾಧ್ಯವಾದಷ್ಟು ನೋಡ್ತೀವಿ'.

ಪಾಪ! ತನ್ನ 2-22 ವಿಸ್ತೀರ್ಣದ ಹೊಲದಲ್ಲಿ ಬರಿಯ 0.22 ಮಾತ್ರ ಪಡೆದ ಬಡ ರೈತನೊಬ್ಬ ಅವರನ್ನು ಕಣ್ಣೀರು ತುಂಬಿದ ಕಣ್ಣಲ್ಲಿ ಅಲ್ಲೇ ನೋಡುತ್ತಾ ನಿಂತಿದ್ದ!

ಸದಸ್ಯರೊಬ್ಬರನ್ನು ಭೇಟಿಯಾದಾಗ ಅವರಂದದ್ದು ಹೀಗೆ 'ಕಾನೂನು ಗೀನೂನು ನನಗೇನು ಗೊತ್ತು ಸ್ವಾಮಿ? ನಮ್ಮ (ಐ) ಕಾಂಗ್ರೆಸ್ ಪಕ್ಷಕ್ಕೆ ಮೊನ್ನೆ ಮೊನ್ನೆ ಬಂದ ಪೋರರೆಲ್ಲಾ ಟ್ರಿಬ್ಯೂನಲ್ ಸದಸ್ಯತನಕ್ಕೆ ಅರ್ಜಿ ಹಾಕಿದರು. ನಾನೂ ಹಾಕಿದೆ. ಬೆಂಗಳೂರಿಗೆ ಹೋದೆ. ನಮ್ಮ ಮ್ಯೊಲಿಯವರನ್ನಾ ನೋಡ್ದೆ. ನನಗೇ ನೇಮಕ ಮಾಡಿದರು. ಆ ಅವರೆಲ್ಲಾ ಪಾರ್ಟಿಗೆ ರಾಜೀನಾಮೆ ಕೊಟ್ಟರು. ಹೋಗಲಿ! ಬೀಡಾ ಬೀಡಿ ಅಂಗಡಿ ಇತ್ತು. ಮುಚ್ಚಿಬಿಟ್ಟೆ. ಈಗ ತೊಂದರೆ ಇಲ್ಲ. ಸೌಖ್ಯವಾಗಿದ್ದೀನಿ. ಯಾರಿಗೆ ಭೂಮಿ ಸಿಕ್ಕಿದ್ರೆ ಏನು, ಹೋದರೆ ನನಗೇನು ಬಿಡಿ, ದಸ್ಕತ್ತು ಹಾಕಿ ಭತ್ತೆ ತಗೊಂಡು ಬರ್ತೀನಿ...'

ಆ ಹೆಡ್ ಗುಮಾಸ್ತನ ಅಭಿಪ್ರಾಯ ವಿಚಿತ್ರವಾಗಿತ್ತು. 'ಯಾರು ಲಂಚ ತಿನ್ನಲ್ಲಾ ಸಾರ್? ಎಂತೆಂತಹ ಮಂತ್ರಿಗಳು ತಿಂತಾರೆ, ಪೇಪರಲ್ಲಿ ಬರುತ್ತೆ. ಯಾರುಯಾರದೋ ಭೂಮಿ ಯಾರ್ಯಾರಿಗೋ ಆಗುತ್ತೆ! ಅದೂ ಪುಕ್ಕಟೆಯಾಗಿ! ನಾವೂ ಈಗ ಏನಾದರೂ ಮಾಡಿಕೊಂಡರೆ ಬಂತು. ವ್ಯರ್ಥ ಜನ ನಮ್ಮ ಮೇಲೆ ರೇಗ್ತಾರೆ......'

ಪೇದೆ ರಾಮಣ್ಣ ತಲೆಮೇಲಿದ್ದ ಗಾಂಧೀಟೊಪ್ಪಿ ತೆಗೆದು ಹೇಳಿದ 'ಇನ್ನು ಟ್ರಿಬ್ಯೂನಲ್ ಎಷ್ಟು ದಿನ ಇರುತ್ತೋ ಗೊತ್ತಿಲ್ಲಾ ಸಾರ್, ಸರ್ಕಾರದವರು ಒಂದೇಸಮನೆ ಹೆಚ್ಚಿಕೆಮಾಡಿ ಎಲ್ಲಾ ಪಡ್ಡಾ ಮಾಡಿಬಿಡುತ್ತಾರಂತೆ!... ಇಲ್ಲಪ್ಪಾ, ನಮಗೆ ಯಾರು ಲಂಚ ಕೊಡ್ತಾರೆ ಸಾರ್...ಏನಾದರೂ ಎಂಟಾಣೆ ಒಂದ್ರೂಪಾಯಿ...ಆದರೂ ದಿನಾ ಇಪ್ಪತ್ತುಮೂವತ್ತು ರೂಪಾಯಿ ಅಷ್ಟೇ... ಹೂಂ, ಹೂಂ, ತುಂಬಾ ಖರ್ಚು ಸಾರ್, ಅಲ್ಲಿಂದಲ್ಲಿಗೆ ಬರುತ್ತೆ ಅಷ್ಟೇ ಸಾರ್...'

ಅಲ್ಲಿಂದ ಮುಂದೆ ಹೋದಾಗ ರೈತನೊಬ್ಬ ತಿಂಗಳದ ನಡುವೆ ನಿಂತು ಆಕಾಶ ನೋಡುತ್ತಾ ಇದ್ದವನು ಹೇಳಿದ '...ಮೇಲೆಯಾದರೂ ಎಲ್ಲಾದರೂ ಜಾಗ ಇದೆಯೇ ಅಂಥ ನೋಡ್ತಾ ಇದ್ದೀನಿ ಸ್ವಾಮಿ, 1974ರಲ್ಲಿ ಡಿಕ್ಲರೇಶನ್ ಕೊಟ್ಟೆ, 1978ರ ವರೆಗೆ ವ್ಯಾದೆ ಮಾಡ್ತಾ ಇದ್ರು. ಒಮ್ಮೆಲೇ ನಿಲ್ಲಿಸಿಬಿಟ್ರು. ಕೇಳಿದ್ರೆ 'ನೋಟಿಸಾಗುತ್ತೆ' ಆಮೇಲೆ ಬಾ ಅಂದ್ರು. ಎರಡು ವರ್ಷಾ ಆದರೂ ನನ್ನನ್ನು ಯಾರೂ ಕರೀಲೇ ಇಲ. ಗಾಬರಿಯಾದೆ. ಯಾರುಯಾರನ್ನೋ ವಕೀಲಪಕೀಲ ಅಂಥ ಕರ್ಕೊಂಡು ಹೋದೆ. ಪ್ರಯೋಜನವಾಗಲಿಲ್ಲ. 'ಬರುವವರ್ಷ ಆಗುತ್ತೆ' ಅಗ ಬಾ ಅಂದ್ರು. ಈ ವರ್ಷ ಜನವರಿಗೆ ಬಂದು ಕೇಳಿದೆ, 'ಸರಿ, ಬಂದಿಯಾ ಸಂತೋಷ. ಆದ್ರೆ ನಿನ್ನ ಫೈಲೇ ಇಲ್ಲವಲ್ಲಾ' ಎಂದರು ತಹಸೀಲ್ದಾರರು. 'ಅಯ್ಯೊ' ಅಂಥ ಅಲ್ಲೇ ಬಿದ್ದುಬಿಟ್ಟೆ ನಾನು. ಪಾಪ! ತಹಸೀಲ್ದಾರ್ ಹೆದರಿದರು. 'ಏಳಪ್ಪಾ ಏಳು, ನಿನಗೆ ಬ್ಲಡ್‌ಪ್ರೆಶ್ಶರೋ, ಹಾರ್ಟ್‌ಟ್ರಬಲ್ಲೋ ಬಂದಿದೆ. ನನಗೂ ಆ ರೋಗ ಬೇರೆ. 'ನಿನಗೆ ಹೊಸ ಫೈಲ್ ಮಾಡ್ತೀನಿ' ಅಂಥ ಹೇಳಿದರು. ಸರಿ, ಆ ಪುಣ್ಯಾತ್ಮ ನನ್ನ ಪರಿಸ್ಥಿತಿ ಡೇಂಜರ್ ಅಂಥ ತಿಳ್ಕೊಂಡನೋ ಏನೊ? ಈ ಮಳೆಗಾಲ ಹಿಡಿಯೋ ಹೊತ್ತಿಗೆ ನೋಟೀಸ ಮಾಡ್ದ. ಈಗ ಟ್ರಿಬ್ಯೂನಲ್ ಹೇಳೋದೇ ಬೇರೆ. ಮೊನ್ನೆ ಗುಂಡ್ರಾಯರು ಹೇಳಿದರಂತೆ ನನ್ನ ಫೈಲ್ 'ಯಜ್ಞ' ಮಾಡಿ ನನ್ನನ್ನು ಅದಕ್ಕೆ ಪೂರ್ಣಾಹುತಿ ಮಾಡಿದ್ರು. 6-00ಎಕರೆ ಜಾಗದಲ್ಲಿ 2-00 ಜಾಗ ಕೊಟ್ಟರು. 'ಹೋಗಪ್ಪಾ...ನಿನ್ನ ಕೇಸು' ಮುಗಿಯಿತು ಎಂದ್ರು...ಎಲ್ಲಾ ಲಂಚ ತಿಂದುಬಿಟ್ರು ಸ್ವಾಮಿ ಬರೀ ಬದ್ಮಾಷ್‌ಗಳು...'

ಧನಿ ಒಬ್ಬರನ್ನು ಟ್ರಿಬ್ಯೂನಲ್ ಅಂಗಳದ ಮಾವಿನ ಕಟ್ಟೆಯಲ್ಲಿ ಭೇಟಿಯಾದಾಗ 'ಇದೆಲ್ಲಾ ಯಾವಾಗ ಮುಗಿಯುತ್ತೋ ಗೊತ್ತಿಲ್ಲ. ಮೂರು ವರ್ಷದಿಂದ ವಾರ ಎರಡು ಸಲ, ಮೂರ್ಸಲ ಅಂಥ ಇಲ್ಲಿಗೆ ಬರ್ತಾ ಇದ್ದೀನಿ. ಅರುವತ್ತು ಎಕರೆ ಜಾಗ ಹೋದರೂ ಐದ್ಸಾವಿರ ರೂಪಾಯಿ ಪರಿಹಾರ ಧನ ಮೂರ್ಸಾವಿರ ಸರ್ತಿ ಈ ಮಾವಿನಕಟ್ಟೆಯಲ್ಲಿ ಮೊಕ್ಕಾಮು ಮಾಡಿದ್ರೂ ಬರ್ಲಿಲ್ಲಾ...ಎಲ್ಲಾ ನಮ್ಮ ಹಣೇಬರಹ...ಕಾಲ ಬಂದ ಹಾಗೇ ಕೋಲ ಸ್ವಾಮಿ...'

## ನಿಜವಾದ ಅಭಿಪ್ರಾಯ

ಇಂದು ಭೂನ್ಯಾಯ ಮಂಡಳಿಗಳ ಬಗೆಗೆ ಜನಾಭಿಪ್ರಾಯ ಏನೂ ಚೆನ್ನಾಗಿಲ್ಲ. ಅದರ ಹೆಸರು ಕೇಳಿದರೆ ರೈತರು, ಮಾಜಿ ಧನಿಗಳು 'ಅಯ್ಯೋ' ಅನ್ನುತ್ತಾರೆ. ಭೂನ್ಯಾಯ ಮಂಡಳಿಗಳು ಸಂತೆಗಿಂತಲೂ ಕೀಳು. ಆ ಸದಸ್ಯರು ಬರೀ ಹೊಲಸು. ಒಬ್ಬನಾದರೂ ಭೂಮಿ ಕಾನೂನಿನ ಬಾಹ್ಯ ರೂಪರೇಷೆಗಳನ್ನೂ ತಿಳಿದವರಲ್ಲ. ಬೀದಿಯಿಂದ ಬಂದವರು. ನಿರ್ಲಕ್ಷವಾಗಿ ಎತ್ತಿಕೊಂಡವರು. ಯೋಗ್ಯತೆಯ ಮಾನದಂಡದಲ್ಲಿ ಅಳೆಯಲ್ಪಡದವರು. ಎಷ್ಟೋ ಜನ ಸದಸ್ಯರು ಆ ಸಿಗುವ ಭತ್ತೆಗಾಗಿ ಬಾಯಿಬಿಟ್ಟವರು. ರೈತನ ಪರಿಸ್ಥಿತಿ, ಜೀವನದ ಬಗ್ಗೆಯಾದರೂ ಅರಿವಿಲ್ಲದವರು. ಕೆಲವರಂತೂ ನೇರವಾಗಿ ಮಾಜೀ ಜಮೀನ್ದಾರರ ಮಕ್ಕಳು. ಅದರಲ್ಲಿಯೂ ಪಕ್ಷ, ಪೈಪೋಟಿಗಳು. ಈ ನ್ಯಾಯ ಮಂಡಳಿಗಳಿಗೆ ಜಾಗಯಿಲ್ಲ, ಕಟ್ಟಡವಿಲ್ಲ ಏನೂ ಇಲ್ಲ. ಎಲ್ಲಾ ಬರೀ ರಗಳೆ ಗೋಳು.

## ಭೂಮಿಗೂ ಕಡತಯಜ್ಞ

ಹೆಚ್ಚಿಕೆ ಟ್ರಿಬ್ಯೂನಲ್‌ಗಳು, ಈ ಕಡತ ಯಜ್ಞದ ನಾಟಕ ಎಲ್ಲಾ ಬರೀ ಗೋಳು. ಯಾರುಯಾರನ್ನೋ ಸತಾಯಿಸುತ್ತಿರುವಂತಹದು. ಭೂಮಿಯ ವಿವಾದಗಳನ್ನು ಬಹಳ ಸೂಕ್ಷ್ಮವಾಗಿ ವಿವರವಾಗಿ ನಿಭಾಯಿಸಿಕೊಂಡು ಹೋಗಬೇಕಾಗಿತ್ತು. ಅದಕ್ಕೆ ಸರಕಾರಕ್ಕೆ ಪುರುಸತ್ತು. ಜನಕ್ಕೆ ತಾಳ್ಮೆಯಿಲ್ಲವಾಗಿದ್ದರೆ ಡಿಕ್ಲರೇಶನ್ ಒಂದು ಕೈಯಲ್ಲಿ ತಗೊಂಡು ಇನ್ನೊಂದು ಕೈಲಿ ನಿರ್ದಾಕ್ಷಿಣ್ಯವಾಗಿ ಕೊಡಬೇಕಾಗಿತ್ತು ಭೂಮಿ. ಈ ಎರಡೂ ಕಾರ್ಯವಿಧಾನ ಬಗೆಹರಿಸದೆ ಯಾರುಯಾರನ್ನೋ ಒಂದು ರಾಜಕೀಯ ಪಕ್ಷದವರನ್ನು ಯಾವುದೇ ಯೋಗ್ಯತೆ, ತಿಳಿವು ಇಲ್ಲದ ಸದಸ್ಯರನ್ನು ಕರೆದು ತಂದು ಗದ್ದುಗೆಯಲ್ಲಿ ಕುಳ್ಳಿರಿಸಿ ಭೂನ್ಯಾಯಪರಿಹರಿಸಲು ಈ ಸರಕಾರ ಪರದಾಡುವುದನ್ನು ಕಂಡರೆ ನಿಜಕ್ಕೂ ಭವಿಷದ ಕತೆಯ ಬಗೆಗೆ ಚಿಂತೆಯಾಗುತ್ತೆ. ಇಂದು ಈ ಅಸಂಖ್ಯಾತ ಟ್ರಿಬ್ಯೂನಲ್‌ಗಳು ಒಂದೊಂದು ಮೊಕದ್ದಮೆಯನ್ನು ವರ್ಷಗಟ್ಟಲೆ ಕಟ್ಟಿಟ್ಟು ಕ್ಷಣಾರ್ಧದಲ್ಲಿ ಈಗ ತೀರ್ಪು ನೀಡುತ್ತಿರುವುದನ್ನು ಗಮನಿಸಿದಲ್ಲಿ ನಾವು ನ್ಯಾಯಕ್ಕೆ ನೀಡುತ್ತಿರುವ ಗಮನ ಎಷ್ಟು ಎನ್ನುವುದು ವ್ಯಕ್ತವಾಗುತ್ತದೆ. ಈ ಟ್ರಿಬ್ಯೂನಲ್‌ಗಳು ರೈತರಿಗೂ, ಧನಿಗಳಿಗೂ ಏನೂ ಸುಖ ಕೊಡುತ್ತಾ ಇಲ್ಲ. ಇನ್ನಾರು ತಿಂಗಳು ಎಂದಾಗ ಈ ಮೊಕದ್ದಮೆಗಳೆಲ್ಲವೂ ಕೊನೆಗೊಂಡರೂ ಅವುಗಳ ನಂತರದ ಪರಿಣಾಮ, ಭವಿಷ್ಯತ್ತುಗಳನ್ನು ನೋಡತಕ್ಕದ್ದಿರುತ್ತದೆ.

○

# ಸ್ಥಳೀಯ ಸಮಿತಿಯ ಸಮ್ಮೇಳನ

20-10-81ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬೆಂಗಳೂರಿನ ಶ್ರೀರಾಂಪುರ ಸ್ಥಳೀಯ ಸಮಿತಿಯ ಸಮ್ಮೇಳನವು ಬೆಂಗಳೂರಿನ ಎನ್.ಜಿ.ಓ. ಹಾಲ್‌ನಲ್ಲಿ ನಡೆಯಿತು.

ಸ್ಥಳೀಯ ಸಮಿತಿಯ ಕಾರ್ಯದರ್ಶಿ ಕಾಂ. ಎ.ವಿ. ರಮೇಶರು ಪ್ರತಿನಿಧಿಗಳನ್ನು ಸ್ವಾಗತಿಸಿ ವರದಿಯನ್ನು ಮಂಡಿಸಿದರು. ಸಮ್ಮೇಳನಕ್ಕೆ ಮುಖ್ಯ ಅತಿಥಿಗಳಾಗಿ ಪಕ್ಷದ ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯ ಕಾಂ. ವಿ.ಜೆ.ಕೆ. ನಾಯರ್ ಆಗಮಿಸಿದ್ದರು.

ಪಕ್ಷದ ಅಖಿಲಭಾರತ 11ನೇ ಅಧಿವೇಶನದ ಪೂರ್ವಭಾವಿಯಾಗಿ ನಡೆಯಬೇಕಾದ ಸಮಿತಿಗಳ ಸಮ್ಮೇಳನಗಳ ವಿವರಗಳನ್ನು ತಿಳಿಸಿದ ಕಾಂ. ವಿ.ಜೆ.ಕೆ.ಯವರು ಸಾಲ್ಕಿಯ ಪ್ಲೀನಂ ನಿರ್ಣಯದ ಆಧಾರದಲ್ಲಿ ಸಂಘಟನೆ ಬಲಪಡಿಸುವಂತೆ ಕರೆ ನೀಡಿದರು. ಸಾಮಾಜಿಕ, ಆರ್ಥಿಕ, ರಾಜಕೀಯ ಹೋರಾಟಗಳಲ್ಲಿ ಪಕ್ಷವು ಮುಂಚೂಣಿಯಲ್ಲಿರಬೇಕಾದ ಅಗತ್ಯವನ್ನು ಒತ್ತಿ ಹೇಳಿದ ಕಾಂ. ವಿ. ಜೆ. ಕೆ. ಇತರ ರಾಜಕೀಯ ಪಕ್ಷಗಳೊಡನೆ ಸಾಮೂಹಿಕ ಹೋರಾಟಗಳಲ್ಲಿ ಪಾಲ್ಗೊಳ್ಳಬೇಕೆಂದರು.

ಪಕ್ಷದ ಜಿಲ್ಲಾ ಸಮಿತಿಯ ಕಾಂ. ಟಿ. ಎಸ್. ಅನಂತರಾಮ್, ಪಿ. ಕೆ. ಸುಬ್ರಮಣಿ ನಾರಾಯಣರಾವ್ ಬಾನು, ಆರ್. ಶ್ರೀನಿವಾಸ್ ಇವರ ನೇತೃತ್ವದಲ್ಲಿ ಸಮ್ಮೇಳನ ನಡೆಯಿತು.

ಕೊನೆಯಲ್ಲಿ ಶ್ರೀರಾಂಪುರ ಸ್ಥಳೀಯ ಸಮಿತಿಗೆ ಈ ಕೆಳಕಂಡ ಸಂಗಾತಿಗಳನ್ನು ಚುನಾಯಿಸಲಾಯಿತು.

ಕಾರ್ಯದರ್ಶಿಯಾಗಿ ಕಾಂ. ಎ.ವಿ. ರಮೇಶ್, ಸಮಿತಿಯ ಸದಸ್ಯರುಗಳಾಗಿ ಕಾಂ. ಕಮನಿಪತಿ, ಎನ್. ರಾಜು, ಪಿ. ನರಸಿಂಹನ್, ಜಿ. ಸುಬ್ಬರಾವ್, ಕೆ. ಮುನಿಸ್ವಾಮಿ, ಸೆಲ್ವರಾಜ್, ಬೃಹಸ್ಪತಿ, ವಿ. ಗೋವಿಂದನ್ ಕುಟ್ಟಿ, ಎನ್. ಟಿ. ರಾಜು ಮತ್ತು ಕಾಂ. ಕೆ. ಎಸ್. ಸುಬ್ರಮಣ್ಯಂ.

●

# ಕಾರ್ಯಕಾರಿ ಸಮಿತಿ ಸಭೆ

ಕರ್ನಾಟಕ ತೋಟ ಕಾರ್ಮಿಕರ ಸಂಘದ ಕಾರ್ಯಕಾರಿ ಸಮಿತಿಯ ಸಭೆಯು ದಿನಾಂಕ 9-10-81ರಂದು ಸಕಲೇಶಪುರದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಸಿ. ನಂಜುಂಡಪ್ಪನವರು ವಹಿಸಿದ್ದರು.

ಅಗತ್ಯ ಸೇವೆಗಳ ನಿರ್ವಹಣಾ ಕಾಯ್ದೆಯನ್ನು ವಾಪಸ್ ತೆಗೆದುಕೊಳ್ಳುವಂತೆ ಸಭೆ ಸರಕಾರವನ್ನು ಒತ್ತಾಯಿಸಿತು.

ತೋಟ ಕಾರ್ಮಿಕರ ಪರಿಷ್ಕೃತ ವೇತನವನ್ನು ನಿಗದಿ ಮಾಡುವಾಗ ಸಂಘದ ಸಲಹೆ ಸೂಚನೆಗಳನ್ನು ಪರಿಗಣಿಸಿ ಪ್ರತಿಯೊಬ್ಬ ಕಾರ್ಮಿಕನಿಗೆ ತಲಾ 500ರೂ.ಗಳಿಗೆ ಕಡಿಮೆ ಇಲ್ಲದಂತೆ ಮಾಸಿಕ ವೇತನವನ್ನು ನಿಗದಿ ಮಾಡಬೇಕೆಂದೂ, ಬೆಲೆ ಏರಿಕೆಗೆ ಅನುಗುಣವಾಗಿ ತುಟ್ಟಿಭತ್ತೆ ಸಿಗಬೇಕೆಂದೂ ರಾಜ್ಯಸರಕಾರವನ್ನು ಸಭೆ ಒತ್ತಾಯಿಸಿತು.

ರಾಜ್ಯಸರಕಾರ ಈಗಾಗಲೇ ಬೀಡಿ ಮುಂತಾದ ಕೈಗಾರಿಕೆಗಳ ಕಾರ್ಮಿಕರ ವೇತನದ ಬಗ್ಗೆ ತಳೆದಿರುವ ಮಾಲೀಕರ ಪರ ಧೋರಣೆಯನ್ನು ಗಮನಿಸಿ, ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ದೀರ್ಘಕಾಲದ ಸಂಘಟಿತ ಹೋರಾಟಕ್ಕೆ ಸನ್ನದ್ಧರಾಗಬೇಕೆಂದು ಸಭೆ ತೋಟಕಾರ್ಮಿಕರಿಗೆ ಕರೆ ಇತ್ತಿತು.

3-11-81ರಂದು ರಾಜ್ಯಾದ್ಯಂತ ನಡೆಯಲಿರುವ ಸಾರ್ವತ್ರಿಕ ಮುಷ್ಕರದಲ್ಲಿ ಪಾಲ್ಗೊಳ್ಳುವಂತೆ ತೋಟ ಕಾರ್ಮಿಕರಿಗೆ ಕರೆ ನೀಡಿದ ಸಭೆ 23-11-81ರಂದು ದೆಹಲಿಯಲ್ಲಿ ನಡೆಯಲಿರುವ ಮುಷ್ಕರಪ್ರದರ್ಶನಕ್ಕೆ ಸಂಘದಿಂದ ಪ್ರತಿನಿಧಿಗಳನ್ನು ಕಳುಹಿಸಲು ತೀರ್ಮಾನಿಸಿತು.

●

## ಆರ್ಥಿಕ ಸಮೀಕ್ಷೆ:

# ಅಳಿಯದ ಜೀತಪದ್ಧತಿ

ಆರ್. ಚಂದ್ರ

ಜೀತಪದ್ಧತಿಯು ಪಾಳೆಯಗಾರಿ ವ್ಯವಸ್ಥೆಯ ಅತ್ಯಂತ ಕ್ರೂರ ಹಾಗೂ ಅಮಾನುಷ ಪದ್ಧತಿಯಾಗಿದೆ. ಜೀತಪದ್ಧತಿಯು ಭಾರತದ ಬಹುಭಾಗಗಳಲ್ಲಿ ಶತಮಾನಗಳಿಂದಲೂ ಜಾರಿಯಲ್ಲಿದೆ. ಆಂಧ್ರದಲ್ಲಿ ಇದನ್ನು 'ಜೀತಂ' ಎನ್ನುತ್ತಾರೆ. ಬಿಹಾರಿನಲ್ಲಿ 'ಕಾಮಿಯಾ' ಎಂದೂ, ಗುಜರಾತಿನಲ್ಲಿ 'ಹಾಲಿ' ಎಂದೂ, ತಮಿಳುನಾಡಿನಲ್ಲಿ 'ಪಡಿಯಾಲ್' ಎಂದೂ, ಉತ್ತರ ಪ್ರದೇಶದಲ್ಲಿ 'ಬಂಧಕ್' ಎಂದೂ ಇದಕ್ಕೆ ಹೆಸರಿದೆ. ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಇದು ಇನ್ನೂ ಉಳಿದಿದೆ. ಈ ಪದ್ಧತಿಯು ಅಳಿದು ಹೋಗುತ್ತಿರುವ ಬದಲು ಉಳಿದು ಬಲವಾಗುತ್ತಿದೆ, ಹಬ್ಬಿ ಹರಡುತ್ತಿದೆ, ತನ್ನ ಬಿಗಿಮುಷ್ಟಿಯನ್ನು ಭದ್ರಗೊಳಿಸುತ್ತಿದೆ.

ಜೀತಪದ್ಧತಿಯ ವ್ಯಾಪಕತೆಯನ್ನು ತಿಳಿಯಲು ಸ್ವಾತಂತ್ರ್ಯಾನಂತರ ನಮಗೆ 30 ವರ್ಷಗಳು ಬೇಕಾದವು. ನ್ಯಾಶನಲ್ ಸ್ಯಾಂಪಲ್ ಸರ್ವೆ (NSS)ಯ 32ನೇ ಸುತ್ತಿನ ಅಧ್ಯಯನದಂತೆ ನಮ್ಮ ದೇಶದಲ್ಲಿ 3.4 ಲಕ್ಷ ಜೀತದಾಳುಗಳಿದ್ದಾರೆ ಎಂದು ತಿಳಿದುಬಂದಿದೆ. ಈ ಮಧ್ಯೆ 12 ರಾಜ್ಯಗಳು ಒಪ್ಪಿಸಿದ ವರದಿಯಂತೆ 1.20 ಲಕ್ಷ ಜೀತದಾಳುಗಳಿರುವರೆಂದು ತಿಳಿದುಬಂದಿದೆ. ತುರ್ತುಪರಿಸ್ಥಿತಿಯಲ್ಲಿ ಜಾರಿಗೆ ಬಂದ 1976ರ ಜೀತ ನಿರ್ಮೂಲನ ಕಾಯಿದೆಯಂತೆ, ಜೀತದಾಳುಗಳನ್ನು ಗುರುತುಹಿಡಿದು ಅವರನ್ನು ಬಂಧವಿಮೋಚನೆಗೊಳಿಸಿ ಅವರಿಗೆ ಸೂಕ್ತ ಮರುಜೀವನ ಸೌಕರ್ಯಗಳನ್ನೊದಗಿಸುವ ಕಾರ್ಯಕ್ರಮಗಳೆಲ್ಲವೂ ಈ ಅಂಕೆಸಂಖ್ಯೆಗಳನ್ನು ಆಧರಿಸಿದ್ದವು. ಆದರೆ, ಮೇ 78ರಿಂದ ಡಿಸೆಂಬರ್ 78ರ ಅವಧಿಯಲ್ಲಿ ಗಾಂಧಿ ಶಾಂತಿ ಪ್ರತಿಷ್ಠಾಪನೆ (Gandhi peace foundation) ಮತ್ತು ನ್ಯಾಶನಲ್ ಸ್ಯಾಂಪಲ್ ಸರ್ವೆ (NSS) ಜಂಟಿಯಾಗಿ 10 ರಾಜ್ಯಗಳಲ್ಲಿನ 1000 ಹಳ್ಳಿಗಳಲ್ಲಿ ನಡೆಸಿದ ಅಧ್ಯಯನದಂತೆ, ದೇಶದಲ್ಲಿ ಸದ್ಯ 26 ಲಕ್ಷ ಜೀತದಾಳುಗಳಿದ್ದಾರೆ ಎಂದು ತಿಳಿದುಬಂದಿದೆ! ಒರಿಸ್ಸಾ ಸರಕಾರವೇ ರಾಜ್ಯದಲ್ಲಿ ಕೇವಲ 31 ಜೀತದಾಳುಗಳಿದ್ದಾರೆ ಎಂದು ಹಿಂದೆ ವರದಿ ಮಾಡಿದ್ದರೂ ಈಗ ರಾಜ್ಯದಲ್ಲಿ ಒಂದು ಲಕ್ಷ ಜೀತದಾಳುಗಳಿದ್ದಾರೆಂದು ಒಪ್ಪಿಕೊಂಡಿದೆ! (Bonded Labourer in India: By Sarma Marla, Review in Indian Express dated 26-7-81)

ಜೀತಪದ್ಧತಿ ಹೇಗೆ ಉಂಟಾಗುವುದು? ಗ್ರಾಮೀಣ ಪ್ರದೇಶಗಳಲ್ಲಿ ಬಡರೈತ ತನ್ನ ಅತ್ಯಂತ ಕಷ್ಟ ಕಾಲದಲ್ಲಿ ಬಡ್ಡಿವ್ಯಾಪಾರಿಯಿಂದ ಅಥವಾ ಭೂಮಾಲಕನಿಂದ ಒಂದು ಸಣ್ಣ ಮೊತ್ತದ ಸಾಲ ಎತ್ತುತ್ತಾನೆ. ವಿಪರೀತ ದರಗಳ ಬಡ್ಡಿಯಿಂದಾಗಿ, ಸಣ್ಣ ಸಾಲ ದೊಡ್ಡದಾಗಿ ಬೆಳೆಯುತ್ತದೆ. ಸ್ವಲ್ಪ ಕಾಲದಲ್ಲಿಯೇ ಆ ಬಡ ರೈತ ತನ್ನ ಪುಟ್ಟ ಹೊಲವನ್ನೂ ಬಡ್ಡಿವ್ಯಾಪಾರಿಗೆ ಅಥವಾ ಭೂಮಾಲಕನಿಗೆ ಮಾರಿಕೊಳ್ಳುತ್ತಾನೆ. ಆದರೆ, ಅವನ ಪರಿಸ್ಥಿತಿ ಏನೂ ಸುಧಾರಿಸುವುದಿಲ್ಲ. ಕ್ರಮೇಣ ಆತ ತನ್ನ ಧನಿಯನ್ನು ಬಿಟ್ಟು, ಹಳ್ಳಿಯನ್ನು ಬಿಟ್ಟು ಹೋಗಲೂ ಸ್ವಾತಂತ್ರ್ಯ ಕಳೆದುಕೊಳ್ಳುತ್ತಾನೆ. ತನ್ನ ಧನಿಯ ಗುಲಾಮನಾಗುತ್ತಾನೆ. ಆತ ತನಗಿಷ್ಟಬಂದವರಲ್ಲಿ ಕೂಲಿ ಕೆಲಸಮಾಡಲು ಸ್ವತಂತ್ರನಾಗಿರುವುದಿಲ್ಲ. ತನ್ನ ಶ್ರಮದಿಂದ ಉತ್ಪಾದಿಸಿದ ವಸ್ತುಗಳನ್ನು ಮಾರುಕಟ್ಟೆಯಲ್ಲಿ ವಿಕ್ರಯಿಸಲು ಸ್ವತಂತ್ರನಾಗಿರುವುದಿಲ್ಲ. ಆದರೆ, ಈ ಕ್ರೂರ ಪದ್ಧತಿ ಇಲ್ಲಿಗೇ ಮುಗಿಯುವುದಿಲ್ಲ. ಹಳೆಯ ಒಂದು ಸಾಲಕ್ಕಾಗಿ, ಅದರ ಮೇಲಿನ ಬಡ್ಡಿ ಬಾಕಿಗಾಗಿ, ಆತನ ಇಡೀ ಕುಟುಂಬದ ಭವಿಷ್ಯವನ್ನೇ ಒತ್ತೆ ಇಡಬೇಕಾಗುವುದು. ಆತನ ಮಕ್ಕಳು, ಮೊಮ್ಮಕ್ಕಳು ಕೂಡಾ ಅಲ್ಪಸ್ವಲ್ಪ ಕೂಲಿಗಾಗಿ ಜೀತದಾಳುಗಳಾಗಿ-ಧನಿಯ ಗುಲಾಮರಾಗಿ ಕೆಲಸಮಾಡಬೇಕಾಗುವುದು.

ಜಂಟಿ ಅಧ್ಯಯನದ ವರದಿಯಂತೆ, ಮೂರರಲ್ಲಿಒಂದು ಜೀತದಾಳುಗಳ ಕುಟುಂಬಗಳಲ್ಲಿ 2-3 ಸದಸ್ಯರಾದರೂ ಈ ಜೀತಪದ್ಧತಿಗೆ ಬಲಿಯಾಗುತ್ತಿರುವರು. ಕೃಷಿಕಾರ್ಮಿಕರು ಹೇಗೆ ತೀವ್ರಗತಿಯಿಂದ ನಿರ್ಗತಿಕರಾಗುತ್ತಿರುವರೆಂಬುದಕ್ಕೆ ಇದೊಂದು ನಿದರ್ಶನ. ಈ ರೀತಿ ಜೀತಪದ್ಧತಿಗೆ ಬಲಿಯಾಗುತ್ತಿರುವವರಲ್ಲಿಯೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನರೇ ಹೆಚ್ಚು. ಇದೇನು ಆಶ್ಚರ್ಯವಲ್ಲ. ಭಾರತದ ಜನಸಂಖ್ಯೆಯಲ್ಲಿ ಹರಿಜನರೂ, ಆದಿವಾಸಿಗಳೂ ಸಾಲದ ಸಂಬಂಧವಾಗಿ ತೀವ್ರ ಶೋಷಣೆ, ದಬ್ಬಾಳಿಕೆಗಳಿಗೆ ಒಳಗಾಗಿದ್ದಾರೆ. ಈ ದಲಿತ ಜನರು ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕವಾಗಿ ತುಳಿತಕ್ಕೊಳಗಾಗಿರುವರು. ಶೇ. 86.6ರಷ್ಟು ಜೀತದಾಳುಗಳು ಬಡ ಹಾಗೂ ಅಸಹಾಯಕ ಹರಿಜನರ ಮತ್ತು ಆದಿವಾಸಿಗಳ ಕುಟುಂಬಗಳಿಗೆ ಸೇರಿದವರಾಗಿದ್ದಾರೆ.

ಜಂಟಿ ಅಧ್ಯಯನದ ಅತಿ ಮುಖ್ಯ ಅಂಶವೆಂದರೆ, ಬಡ್ಡಿವ್ಯಾಪಾರಿಗಳು ಮತ್ತು ಭೂಮಾಲಕರು ಬಡರೈತರಿಗೆ ಸಾಲಕೊಡುವ ಉದ್ದೇಶ ಬಡ್ಡಿಗಳಿಸಲಿಕ್ಕಲ್ಲ. ಬದಲು, ಅವರನ್ನು ತಮ್ಮ ಋಣಕ್ಕೆ ಕೆಡವಿ, ಅವರಿಂದ ದೀರ್ಘಕಾಲ ಕಡಿಮೆ ಕೂಲಿಯಲ್ಲಿ ಕೆಲಸಮಾಡಿಸುವ ಉದ್ದೇಶವೇ ಮುಖ್ಯವಾದುದು. ಭೂಮಾಲಕರಿಗೆ ತಮ್ಮ ಭೂಹಿಡುವಳಿಯನ್ನು ಹೆಚ್ಚಿಸುವುದರೊಂದಿಗೇ ತಮ್ಮ ಹೊಲಗಳಲ್ಲಿ ಅಗ್ಗದ ಕೂಲಿಗೆಖಾತ್ರಿಯಾಗಿ ಖಾಯಂ ಆಗಿ ಕೆಲಸಮಾಡಲು ಕೂಲಿಗಾರರು ಬೇಕಾಗುತ್ತಾರೆ. ಅದಕ್ಕಾಗಿ ಬಡ ರೈತರಿಗೆ ಕಷ್ಟ ಕಾಲದಲ್ಲಿ ಪುಟ್ಟ ಸಾಲ ಕೊಟ್ಟು ತಮ್ಮ ಬಲೆಗೆ ಬೀಳಿಸಿಕೊಳ್ಳುತ್ತಾರೆ. ಆದುದರಿಂದ ಯೌವನಸ್ಥರಿಗೇ ಇಂತಹ ಸಾಲಕೊಡುತ್ತಾರೆ. ಜೀತದಾಳುಗಳಲ್ಲಿ ಶೇ. 79ರಷ್ಟು 40 ವರ್ಷಕ್ಕಿಂತ ಕಡಿಮೆ ಪ್ರಾಯದವರೆಂದು ತಿಳಿದುಬಂದಿದೆ. ಕೇವಲ ಶೇ. 8ರಷ್ಟು ಜೀತದಾಳುಗಳು ಶೇ. 50ಕ್ಕಿಂತಲೂ ಹೆಚ್ಚು ದರದ ಬಡ್ಡಿ ಕೊಡುತ್ತಾರೆ.ಆದುದರಿಂದ ಗ್ರಾಮೀಣ ಸಾಲಗಳ ಉದ್ದೇಶ ಬಡ್ಡಿಗಳಿಕೆಗಿಂತಲೂ ಅಗ್ಗದ ಕೂಲಿಕಾರರನ್ನು ಖಾಯಂ ಆಗಿ ಪಡೆಯುವುದೇ ಮುಖ್ಯವಾಗಿದೆ. ಜೀತಪದ್ಧತಿಯಿಂದ ಹೆಚ್ಚು ಶೋಷಿಸಬಹುದಾಗಿದೆ. ಯೌವನಸ್ಥರ ಕಾಯಕಷ್ಟಗಳ ಪ್ರತಿಫಲವೆಲ್ಲವೂ ಭೂಮಾಲಕರಿಗೇ ಸೇರುವುವು. 40 ವರ್ಷ ಪ್ರಾಯ ಮೀರಿದ ಜೀತದಾಳುಗಳು ತಮ್ಮ ಮಕ್ಕಳನ್ನು, ತಮ್ಮ ತಂಗಿಯಂದಿರನ್ನು ಜೀತದಾಳುಗಳಾಗಿ ಕಳಿಸಿ ತಾವು ಜೀತಮುಕ್ತರಾಗುವರು!

ಜೀತ ಬಂಧನದಲ್ಲಿರುವ ಅವಧಿ ಸರಾಸರಿ ಆರು ವರ್ಷಗಳೆಂದು ತಿಳಿದುಬಂದಿದೆ. ಆದರೆ, ಕಠಿಣ ಆರ್ಥಿಕ ಸಂಕಷ್ಟಗಳು, ಕಡುಬಡತನ ಮತ್ತು ದಾರಿದ್ರ್ಯ, ಇತ್ಯಾದಿ ಕಾರಣಗಳಿಂದ ದೀರ್ಘಕಾಲ ಜೀತದಾಳುಗಳಾಗಿ ಸಾಲಗಾರರು ದುಡಿಯಬೇಕಾಗುವುದು. ಬಡರೈತರು ಅನುತ್ಪಾದಿತ ಹಾಗೂ ಅನವಶ್ಯಕ ಉದ್ದೇಶಗಳಿಗಾಗಿ ಸಾಲಮಾಡಿ ಜೀತಪದ್ಧತಿಗೆ ಬಲಿಯಾಗುವರೆಂಬ ಸಾಮಾನ್ಯ ಗ್ರಹಿಕೆಯು ತಪ್ಪು ಎಂದು ವರದಿಯು ಸ್ಪಷ್ಟಪಡಿಸುವುದು. ಜೀತದಾಳುಗಳು ಪಡೆದ ಸಾಲಗಳ ಶೇ. 30ರಷ್ಟು ಮಾತ್ರ ಮದುವೆ, ಹಬ್ಬ ಮತ್ತಿತರ ಸಮಾರಂಭಗಳಿಗೆ ಸಂಬಂಧಿಸಿದ್ದಾದರೆ, ಶೇ. 55ರಷ್ಟು ಜೀವನಾವಶ್ಯಕ ವಸ್ತುಗಳಿಗಾಗಿ, ವ್ಯವಸಾಯಕ್ಕಾಗಿ ಸಂಬಂಧಿಸಿವೆ ಎಂದು ಅಧ್ಯಯನದಿಂದ ತಿಳಿದುಬಂದಿದೆ.

1974-75ರಲ್ಲಿ ಪ್ರಕಟವಾದ ಗ್ರಾಮೀಣ ಕೆಲಸಗಾರರ ತನಿಖಾ ವರದಿಯೂ ಇದನ್ನೇ ಸ್ಪಷ್ಟಪಡಿಸುವುದು. ಈ ವರದಿಯಂತೆ ಶೇ. 19ರಿಂದ ಶೇ. 24ರಷ್ಟು ಸಾಲ ಮಾತ್ರ ಮದುವೆ, ಹಬ್ಬ, ಸಮಾರಂಭಗಳಿಗೆ ಸಂಬಂಧಿಸಿದವುಗಳು. ಉಳಿದ ಸಾಲಗಳೆಲ್ಲವೂ ಜೀವನಾವಶ್ಯಕ ವಸ್ತುಗಳಿಗಾಗಿಯೂ, ವ್ಯವಸಾಯಕ್ಕಾಗಿಯೂ ಸಂಬಂಧಿಸಿದವುಗಳು. ಬಿಹಾರ, ಒರಿಸ್ಸಾ ಮುಂತಾದ ರಾಜ್ಯಗಳಲ್ಲಿ ಹೆಚ್ಚಿನ ಜೀತದಾಳುಗಳು ಸಾಲ ತೆಗೆದಿರಲೇ ಇಲ್ಲ. ಅವರು ನಿರುದ್ಯೋಗಿಗಳಾಗಿದ್ದುದರಿಂದ, ಕಡುಬಡವರಾಗಿದ್ದುದರಿಂದ, ಕಡಿಮೆ ಕೂಲಿಗಾದರೂ ಖಾಯಂ ಕೆಲಸ ಸಿಗುವುದಲ್ಲಾ ಎಂಬ ಕಾರಣದಿಂದ ಜೀತದಾಳುಗಳಾಗಬೇಕಾಯಿತು. ಜೀತಪದ್ಧತಿಯು ಸಾಲ ಪಡೆದುದರಿಂದ ಮಾತ್ರ ಇರುವುದಲ್ಲ. ಗ್ರಾಮೀಣ ಬಡವರು ಮಾಲಕನೊಂದಿಗಿಟ್ಟುಕೊಂಡ ವೈಯಕ್ತಿಕ ಸಂಬಂಧ, ಭೂಮಿ ಹಂಚುವಿಕೆಯಲ್ಲಿರುವ ಅಸಮಾನತೆ, ಸಾಮಾಜಿಕ ಒತ್ತಡ, ಅಮಾನುಷ ಬಲಾತ್ಕಾರ ಹಾಗೂ ಅಸಹಾಯಕತೆ, ಬದಲೀ ಕೆಲಸ ಇಲ್ಲದಿರುವುದು, ವ್ಯವಸಾಯೇತರ ಕೆಲಸಗಳಿಲ್ಲದಿರುವಾಗಿನ ದಾರುಣಸ್ಥಿತಿ, ನಿರುದ್ಯೋಗ ಇತ್ಯಾದಿಗಳೆಲ್ಲವೂ ಗ್ರಾಮೀಣ ಬಡಜನರನ್ನು ಜೀತಪದ್ಧತಿಗೆ ಬಲಿಹಾಕುವುವು.

ಕೃಷಿಕಾರ್ಮಿಕರ ಕುಟುಂಬಗಳು ಸಾಲ ಪಡೆಯುವುದು ಹೆಚ್ಚಾಗಿ ಬಡ್ಡಿ ವ್ಯಾಪಾರಿಗಳಿಂದ ಮತ್ತು ಭೂಮಾಲಕರಿಂದ. 1965ರಲ್ಲಿ ಈ ಮೂಲಗಳಿಂದ ಅವರು ಪಡೆದ ಸಾಲಗಳ ಮೊತ್ತವು ಶೇ. 30ರಷ್ಟಾಗಿದ್ದರೆ, 1978ರಲ್ಲಿ ಶೇ. 50ರಷ್ಟಾಗಿದೆ. ಅಂದರೆ ಗ್ರಾಮೀಣ ಬಡವರ ಪಾಲಿಗೆ, ಕೃಷಿಕೂಲಿಕಾರರಿಗೆ ಸಹಕಾರ ಸಂಘಗಳಿಂದಾಗಲೀ, ವಾಣಿಜ್ಯ ಬ್ಯಾಂಕುಗಳಿಂದಾಗಲೀ ಸಾಲ ಸೌಕರ್ಯಗಳು ಸಿಗುವುದು ದುರ್ಲಭ. ಈ ವರ್ಗದ ಜನರಿಗೆ ದೊರೆಯುವ ಸಾಲಗಳ ಮೊತ್ತದಲ್ಲಿ ಸಹಕಾರಿ ಸಂಘಗಳ ಪಾಲು ಶೇ. 5ರಷ್ಟು, ವಾಣಿಜ್ಯ ಬ್ಯಾಂಕುಗಳಿಂದ ಶೇ. 2ರಿಂದ 4ರಷ್ಟು ಮಾತ್ರವಾಗಿದೆ!

ಜೀತಪದ್ಧತಿಯನ್ನು ನಿರ್ಮೂಲನಗೊಳಿಸಲು ಶಾಸನವನ್ನೇನೋ ಮಾಡಲಾಗಿದೆ. ಆದರೆ ಅದನ್ನು ಜಾರಿಗೆ ತರುವ ರಾಜಕೀಯ, ಸಾಮಾಜಿಕ ನಿಷ್ಠೆ ಯಾರಲ್ಲಿದೆ? ಕಾನೂನು ಬರೆದ ಕಾಗದದಲ್ಲಿಯೇ ಉಳಿದಿದೆ. ಜೀತಪದ್ಧತಿ ಮಾತ್ರ ಬೆಳೆಯುತ್ತಿದೆ. ಜೀತದಾಳುಗಳ ಪುನರ್ಜೀವನ ವ್ಯವಸ್ಥೆಯ ಕಾರ್ಯಕ್ರಮಗಳೂ ಆಡಳಿತಗಾರರ ಔದಾಸೀನತೆಯಿಂದ ಕುಂಠಿತವಾಗುತ್ತಿದೆ. ಬಂಧನ ಮುಕ್ತರಾದ ಸಾವಿರಾರು ಜೀತದಾಳುಗಳು ಪುನಃ ಜೀತಪದ್ಧತಿಗೇ ಮರಳುತ್ತಿದ್ದಾರೆ! ಕಾರಣ, ಅವರಿಗೆ ಖಾಯಂ ಕೆಲಸ ಸಿಗುತ್ತಿಲ್ಲ, ಕನಿಷ್ಠ ಕೂಲಿಯೂ ಸಿಗುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಕೃಷಿಕಾರ್ಮಿಕರು ಸ್ವತಂತ್ರರಾಗಿ ಬಾಳಲು ಕಷ್ಟಸಾಧ್ಯ. ಗ್ರಾಮೀಣ ಸಾಲರದ್ದತಿಯಿಂದಲೂ ಜೀತಪದ್ಧತಿ ನಿರ್ಮೂಲನವಾಗಲಿಲ್ಲ. ಕಾರಣ, ಸಾಲ ಕೇಳುವ ಪರಿಸ್ಥಿತಿಯಲ್ಲಿ ಬದಲಾವಣೆಯಾಗಲಿಲ್ಲ.

ಜೀತಪದ್ಧತಿಯು ಪಾಳೆಯಗಾರಿ ಭೂಸಂಬಂಧದ ಅವಿಭಾಜ್ಯ ಅಂಗವಾಗಿದೆ. ಅಳಿದುಳಿದ ಪಾಳೆಯಗಾರಿ ಪದ್ಧತಿಯು ಸಂಪೂರ್ಣವಾಗಿ ನಿರ್ಮೂಲನವಾಗದೆ, ಜೀತಪದ್ಧತಿಯು ಅಳಿಯಲಾರದು. ಅದಕ್ಕಾಗಿ, ಭೂಸುಧಾರಣೆಯನ್ನು ತ್ವರಿತಗತಿಯಲ್ಲಿ ಜಾರಿಗೊಳಿಸಬೇಕು. ಹೆಚ್ಚುವರಿ ಭೂಮಿಯನ್ನು ಭೂರಹಿತ ಕೃಷಿಕಾರ್ಮಿಕರಿಗೂ, ಬಡರೈತರಿಗೂ ಮರುವಿತರಣೆ ಮಾಡಬೇಕು. ಗ್ರಾಮೀಣ ಸಾಲ ಸಂಪೂರ್ಣ ರದ್ದುಗೊಳಿಸಿ ಸಹಕಾರ ಸಂಘಗಳಿಂದ ಮತ್ತು ವಾಣಿಜ್ಯ ಬ್ಯಾಂಕುಗಳಿಂದ ಗ್ರಾಮೀಣ ಬಡವರಿಗೆ ವ್ಯವಸಾಯಕ್ಕೂ, ಜೀವನಾವಶ್ಯಕತೆಗಳಿಗೂ, ಮದುವೆ ಮುಂತಾದ ಸಮಾರಂಭಗಳಿಗೂ ಸಾಲ ಸಿಗಬೇಕು. ಕೃಷಿಕಾರ್ಮಿಕರ ಕನಿಷ್ಠ ಕೂಲಿ ಹೆಚ್ಚಿಸಬೇಕು. ಅವರ ಕೆಲಸದಲ್ಲಿ ಭದ್ರತೆ ನೀಡಬೇಕು. ವ್ಯವಸಾಯೇತರ ಕಸುಬುಗಳಲ್ಲಿ ಗ್ರಾಮೀಣ ಕಾರ್ಮಿಕರನ್ನು ತರಬೇತುಗೊಳಿಸಬೇಕು. 'ಕೆಲಸಕ್ಕಾಗಿ ಕಾಳು' ಯೋಜನೆಗಳನ್ನು ಕಾರ್ಯಗತಗೊಳಿಸಿ ಗ್ರಾಮೀಣ ಕಾರ್ಮಿಕರನ್ನು ಭೂಮಾಲಕರ ಮತ್ತು ಬಡ್ಡಿ ವ್ಯಾಪಾರಿಗಳ ಋಣದಿಂದ ಮುಕ್ತಗೊಳಿಸಬಹುದು. ಜೀತಪದ್ಧತಿಯ ನಿರ್ಮೂಲನಕ್ಕಾಗಲೀ, ಕೃಷಿಕಾರ್ಮಿಕರ ಮತ್ತು ಬಡರೈತರ ಏಳಿಗೆಗಾಗಲೀ ಭೂಮಾಲೀಕ-ಬಂಡವಾಳಶಾಹಿ ಪರವಾದ ಸರಕಾರವನ್ನು ನಂಬಿದರೆ ಪ್ರಯೋಜನವಿಲ್ಲ.ಬದಲು, ಗ್ರಾಮೀಣ ಬಡವರು ಸಂಘಟಿತರಾಗಿ ಹೋರಾಟದ ಕಣಕ್ಕಿಳಿಯಬೇಕು.

•

## ತರಬೇತಿ ಶಿಬಿರ

ಸೆಪ್ಟಂಬರ್ 22 ಮತ್ತು 23 ರಂದು ಸುಳ್ಯ ತಾಲ್ಲೂಕಿನ ತೋಡಿಖಾನದಲ್ಲಿ ರೈತಸಂಘದ ವತಿಯಿಂದ ತರಬೇತಿ ಶಿಬಿರವೊಂದನ್ನು ನಡೆಸಲಾಯಿತು.

ಈ ಶಿಬಿರದಲ್ಲಿ ಸುಮಾರು 35 ಜನ ಕಾರ್ಯಕರ್ತರು ಭಾಗವಹಿಸಿದ್ದರು. ದ. ಕ. ಜಿಲ್ಲಾ ರೈತಸಂಘದ ಪ್ರಧಾನಕಾರ್ಯದರ್ಶಿ ಕಾಂ. ಜನಾರ್ದನ ನಾಯಕರು ಶಿಬಿರವನ್ನು ಉದ್ಘಾಟಿಸಿದರು. ಪ್ರಾಂತ ರೈತಸಂಘದ ಪ್ರಧಾನಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್ ಅವರು ಮುಖ್ಯ ಉಪನ್ಯಾಸಕರಾಗಿ ಆಗಮಿಸಿದ್ದರು.

○

# ಕೇರಳ ರಂಗದಲ್ಲಿ ವಿಷಮಗೊಂಡ ಸಂಬಂಧ

ಇ. ಎಂ. ಎಸ್. ನಂಬೂದಿರಿಪಾದ್

ಲೋಕಸಭೆಯಲ್ಲಿ ಅವಿಶ್ವಾಸ ಗೊತ್ತುವಳಿಯ ಮೇಲಿನ ಚರ್ಚೆಗೆ ಉತ್ತರಕೊಡುತ್ತಾ ಪ್ರಧಾನಮಂತ್ರಿಯವರು ತನ್ನ ಭಾಷಣದಲ್ಲಿ "ರಾಜಕೀಯ ಕೊಲೆ"ಗಳ ಬಗ್ಗೆ ಹೇಳುತ್ತಾ ಕೇರಳವನ್ನು ಪ್ರತ್ಯೇಕವಾಗಿ ಹೆಸರಿಸಿದ್ದೇಕೆ?

ಆಕೆಯ ಪಕ್ಷ ಪಶ್ಚಿಮ ಬಂಗಾಳ ಅಥವಾ ತ್ರಿಪುರಾದ ಬಗ್ಗೆ ಶತ್ರುತ್ವದ ಭಾವನೆಯನ್ನು ಬಿಟ್ಟುಕೊಟ್ಟಿದೆ ಎಂಬ ಭ್ರಮೆ ಯಾರಿಗೂ ಇಲ್ಲ. ಈ ಮೂರೂ ರಾಜ್ಯಗಳನ್ನು ಅದು "ತಪ್ಪಿತಸ್ಥ" ಎಂದು ಪರಿಗಣಿಸಿ "ಹಿಂಸಾತ್ಮಕ" ಹಾಗೂ "ಕೊಲೆಪಾತಕ" ಚಟುವಟಿಕೆಗಳಿಗಾಗಿ ಅವುಗಳ ಮೇಲೆ ಎರಗುತ್ತಿದೆ. ವಾಸ್ತವವಾಗಿ, ಪ್ರಧಾನಮಂತ್ರಿಯವರ ಲೋಕಸಭಾ ಭಾಷಣದ ಕೆಲವೇ ಗಂಟೆಗಳೊಳಗೆ ಗೃಹವ್ಯವಹಾರಗಳ ರಾಜ್ಯಮಂತ್ರಿ ಯೋಗೇಂದ್ರಮಕ್ವಾನಾ ಪಶ್ಚಿಮ ಬಂಗಾಳ "ರಾಜಕೀಯ ಕೊಲೆ"ಗಳ ವಿಷಯದಲ್ಲಿ ದಾಖಲೆಮುರಿದಿದೆಯೆಂದು ಅಲ್ಲಿನ ಜನತೆಗೆ ತಿಳಿಸಲು ಅವಸರವಸರವಾಗಿ ಕಲ್ಕತ್ತೆಗೆ ಭೇಟಿನೀಡಿದ್ದರು.

## ಒಂದು ದೊಡ್ಡ ವ್ಯತ್ಯಾಸ

ಆದರೆ ಪಶ್ಚಿಮಬಂಗಾಳ ಮತ್ತು ತ್ರಿಪುರಾ ಹಾಗೂ ಕೇರಳದ ನಡುವೆ ಒಂದು ದೊಡ್ಡ ವ್ಯತ್ಯಾಸವಿದೆ. ಮೊದಲೆರಡೂ ರಾಜ್ಯಗಳಲ್ಲಿ ಕಾಂಗ್ರೆಸ್ (ಐ) ನಲ್ಲಿ ಆಂತರಿಕವಾಗಿ ಎಷ್ಟೊಂದು ಒಡಕಿದೆ ಹಾಗೂ ಎಡರಂಗ ಸರಕಾರಕ್ಕೆ ವಿಧಾನಮಂಡಲದಲ್ಲಿ ಎಷ್ಟೊಂದು ಅಗಾಧ ಬಹುಮತವಿದೆಯೆಂದರೆ ಕಾಂಗ್ರೆಸ್(ಐ) ಈಗಿನ ಸರಕಾರದ ಸ್ಥಾನದಲ್ಲಿ ತನ್ನ ಸರಕಾರ ಸ್ಥಾಪಿಸುವುದನ್ನು ಕನಸಿನಲ್ಲಿಯೂ ನೆನೆಸಲು ಸಾಧ್ಯವಿಲ್ಲ.

ಕೇಂದ್ರ ಸರಕಾರ ತನ್ನ ಅಧಿಕಾರ ಉಪಯೋಗಿಸಿ ರಾಜ್ಯಸರಕಾರಗಳನ್ನು ಬರಖಾಸ್ತುಮಾಡಿ ಹೊಸ ಚುನಾವಣೆಯ ಆದೇಶ ನೀಡಿದರೂ ಎಡರಂಗಗಳನ್ನು ಚುನಾವಣೆಯಲ್ಲಿ ಸೋಲಿಸುವ ಭರವಸೆ ಕಾಂಗ್ರೆಸ್(ಐ) ಇಟ್ಟುಕೊಳ್ಳುವಂತಿಲ್ಲ. ಈ ಮಾರ್ಗ ಹಿಡಿದರೆ ಅದು ಆ ಪಕ್ಷಕ್ಕೆ ಇನ್ನೂ ಹೆಚ್ಚು ಅವಮಾನಕರವಾದ ರಾಜಕೀಯ ಸೋಲಿನಲ್ಲಿ ಪರ್ಯವಸಾನವಾಗುವುದು.

ಆದ್ದರಿಂದಲೇ, ಜೂನ್ 1982ರಲ್ಲಿ ನಡೆಯಬೇಕಾದ ಚುನಾವಣೆಗಳನ್ನು ಮೂರುತಿಂಗಳು ಮೊದಲೇ ನಡೆಸಬೇಕೆಂಬ ಪಶ್ಚಿಮಬಂಗಾಳ ಎಡರಂಗ ಸಮಿತಿಯ ಸೂಚನೆಯನ್ನು ಕಾಂಗ್ರೆಸ್(ಐ) ರಾಜ್ಯಕಾರ್ಯದರ್ಶಿ ಸಂತೋಷ್ ರಾಯ್ ವಿರೋಧಿಸುತ್ತಿರುವ ಕುತೂಹಲಕಾರಿ ದೃಶ್ಯವನ್ನು ನಾವು ಕಾಣುತ್ತಿದ್ದೇವೆ. ಅವರು ಮುಂದುವರೆದು "ಸರಕಾರ ಪೂರ್ಣ ಅವಧಿಯವರೆಗೆ ಅಧಿಕಾರದಲ್ಲಿ ಉಳಿದು ಜನತೆಗೆ ಕೊಟ್ಟ ವಚನಗಳನ್ನು ಪಾಲಿಸಬೇಕೆಂದು ತನ್ನ ಪಕ್ಷ ಬಯಸುತ್ತದೆ" ಎಂದು ಹೇಳಿದ್ದಾರೆ (ಪೇಟ್ರಿಯಟ್, ಸೆಪ್ಟಂಬರ್ 25). ರಾಜ್ಯದಲ್ಲಿ ಕಾಂಗ್ರೆಸ್(ಐ) ತನ್ನ ಆಂತರ್ಯವನ್ನು ಸರಿಗೊಳಿಸಿ ಮುಂದಿನ ವರ್ಷದ ಚುನಾವಣೆಗಳಲ್ಲಿ ಹೋರಾಡುವಂತಾಗಲು ಅದಕ್ಕೆ ಇನ್ನೂ ಹೆಚ್ಚು ಸಮಯ ಬೇಕಾಗಿದೆಯೆಂಬುದೇ ಇದಕ್ಕೆ ಕಾರಣ ಎಂದು ತಿಳಿದುಬಂದಿದೆ.

ಕೇರಳದಲ್ಲೂ ಕಾಂಗ್ರೆಸ್ (ಐ) ತೀವ್ರ ಒಡಕುಗಳನ್ನು ಹೊಂದಿದೆಯೆಂಬುದು ನಿಜ. ಎಡ-ಪ್ರಜಾಸತ್ತಾತ್ಮಕ ರಂಗ ಇಲ್ಲಿ ರಾಜ್ಯ ವಿಧಾನಸಭೆಯಲ್ಲಿ ನಿಚ್ಚಳ ಬಹುಮತ-141 ರಲ್ಲಿ 94-ಪಡೆದಿದೆ. ಅಲ್ಲದೆ, 'ವಿಮೋಚನಾ ಸಮರ'ದ ಹೊಸ ಆವೃತ್ತಿಯ ಒತ್ತಡದಿಂದ ಮಂತ್ರಿಮಂಡಲವನ್ನು ರಾಜೀನಾಮೆಕೊಡುವಂತೆ 'ಬಲವಂತ' ನಡೆಸುವ ಈ ಹಿಂದಿನ ಪ್ರಯತ್ನಗಳು ಈ ರಾಜ್ಯದಲ್ಲೂ ಗುರಿತಪ್ಪಿದವು. ಕಾಂಗ್ರೆಸ್(ಐ)ನ ಮಿತ್ರಪಕ್ಷಗಳಾದ ಬಿ.ಜೆ.ಪಿ., ಜನತಾ ಹಾಗೂ ಕೇರಳ ಕಾಂಗ್ರೆಸ್(ಜೆ) ಈ ಪ್ರಯತ್ನಗಳಿಂದ ದೂರವಾದವು. ಆದ್ದರಿಂದ "ವಿಮೋಚನಾ ಸಮರ"ದ "ಹೀರೋ"ಗಳು ಕೂಡಲೇ ಹಿಂಸರಿದು ಆ ಮಾರ್ಗ ಹಿಡಿಯಬೇಕೆಂಬ ಯಾವ ಅಭೀಪ್ಸೆಯೂ ತಮಗಿರಲಿಲ್ಲವೆಂದು ಹೇಳಬೇಕಾಯಿತು.

## ಆಂತರಿಕ ಸಮಸ್ಯೆಗಳು

ಆದರೆ, ಪಶ್ಚಿಮಬಂಗಾಳ ಹಾಗೂ ತ್ರಿಪುರಾ ಎಡರಂಗಗಳಿಗಿಲ್ಲದ ತನ್ನದೇ ಆದ ಆಂತರಿಕ ಸಮಸ್ಯೆಗಳು ಕೇರಳದ ಎಡ-ಪ್ರಜಾಸತ್ತಾತ್ಮಕ ರಂಗಕ್ಕಿದೆ. ಸಿ.ಪಿ.ಐ.(ಎಂ) ಏಕೈಕ ದೊಡ್ಡ ಪಕ್ಷವಾಗಿದ್ದರೂ ವಿಧಾನಸಭೆಯಲ್ಲಿನ ರಂಗದೊಳಗೆ ನಲ್ವತ್ತು ಶೇಕಡಾಕ್ಕಿಂತಲೂ ಕಡಿಮೆ ಬಲಹೊಂದಿದೆ. ರಂಗದ ಇತರ ಹೆಚ್ಚಿನ ಅಂಗಗಳು ಈ ಹಿಂದಿನ ಸಿ.ಪಿ.ಐ.(ಎಂ) ವಿರೋಧೀ ರಂಗದ ಪಾಲುದಾರರೂ ಆಗಿದ್ದು ರಂಗದ ಅಂಗಪಕ್ಷಗಳ ನಡುವಿನ ಪರಸ್ಪರ ಸಂಬಂಧಗಳು ರಂಗವು ಪೂರ್ಣರೂಪದಲ್ಲಿ ಸುಲಲಿತವಾಗಿ ಕಾರ್ಯನಿರ್ವಹಿಸುವಂತಾಗುವ ರೀತಿಯಲ್ಲಿ ಇಲ್ಲ. ಆದ್ದರಿಂದ ರಂಗದ ಆಂತರಿಕ ಸಮಸ್ಯೆಗಳು ಈ ರಾಜ್ಯದಲ್ಲಿ ರಂಗಕ್ಕೆ ಮತ್ತು ಸರಕಾರಕ್ಕೆ ತೊಂದರೆಯುಂಟುಮಾಡುತ್ತಿದೆ; ಪಶ್ಚಿಮಬಂಗಾಳ ಹಾಗೂ ತ್ರಿಪುರಾದಲ್ಲಿ ಅವೊಂದು ಅಂಶವೇ ಅಲ್ಲ.

ಸದ್ಯದ ಗಳಿಗೆಯಲ್ಲಿ ಸಿ.ಪಿ.ಐ(ಎಂ) ಹಾಗೂ ಕಾಂಗ್ರೆಸ್(ಎಸ್) ನಡುವಿನ ಸಂಬಂಧಗಳು ವಿಶೇಷವಾಗಿ ಬಿಗಡಾಯಿಸಿವೆ. ಹಿಂದೆ ಹಲವು ಸಂದರ್ಭಗಳಲ್ಲಿ ಹೇಳಿದಂತೆ ಈಗಲೂ ಕೆ.ಪಿ.ಸಿ.ಸಿ.(ಎಸ್) ನ ಅಧ್ಯಕ್ಷ ಎ.ಕೆ. ಆ್ಯಂಟನಿಯವರು ಸಿ.ಪಿ.ಐ(ಎಂ) ಗೃಹಮಂತ್ರಿಯ ಕಾರ್ಯನಿರ್ವಹಣೆಯ ಬಗ್ಗೆ ತಮ್ಮ ಪಕ್ಷ ಏನೇನೂ ತೃಪ್ತಿ ಹೊಂದಿಲ್ಲ ಎಂದಿದ್ದಾರೆ. "ಕಾನೂನು ಮತ್ತು ವ್ಯವಸ್ಥೆ" ಪರಿಸ್ಥಿತಿ ಬಗ್ಗೆ ಅವರ ಕೆಲವು ಹೇಳಿಕೆಗಳು ಕಾಂಗ್ರೆಸ್(ಐ) ಚಳುವಳಿಗಾರರನ್ನು ಹುರಿದುಂಬಿಸುವ ರೀತಿಯವಾಗಿವೆ.

ವಾಸ್ತವವಾದ ಸಂಗತಿಯೆಂದರೆ, ಪ್ರಧಾನಮಂತ್ರಿಯವರು ತನ್ನ ಲೋಕಸಭಾ ಭಾಷಣಮಾಡುತ್ತಿರುವಾಗ ಇಲ್ಲಿ ಆ್ಯಂಟನಿ ಹಾಗೂ ಅವರ ಸಹಚರರು ಕೆಲವು ಟಿಪ್ಪಣಿಗಳನ್ನು ಮಾಡಿದ್ದರು. ಅವು ಪತ್ರಿಕೆಗಳಲ್ಲಿ "ಸಿ.ಪಿ.ಐ.(ಎಂ)ಹಾಗೂಕಾಂಗ್ರೆಸ್(ಎಸ್) ಸಂಬಂಧ ಮುರಿಯುವ ಕಾಲ ಸನ್ನಿಹಿತವಾಗಿವೆ" ಎಂದು ಚಿತ್ರಿಸುವಂತೆ ಪ್ರಕಟವಾಗಿದ್ದವು. ಪ್ರಧಾನಮಂತ್ರಿಯವರು ಈ ಪ್ರಕ್ರಿಯೆಗೆ ಸಹಾಯ ಮಾಡಬಯಸಿದರೆಂಬುದು ಸ್ಪಷ್ಟ. ಆದ್ದರಿಂದಲೇ ರಾಜಕೀಯ ಕೊಲೆಗಳ ಆಪಾದನೆಗಳ ಬಗ್ಗೆ ಕೇರಳವನ್ನು ಪ್ರತ್ಯೇಕವಾಗಿ ಹೆಸರಿಸಿದ್ದು.

ಸುಮಾರು ಒಂದು ತಿಂಗಳ ಹಿಂದೆ ಸುಮಾರಾಗಿ ಇದೇ ರೀತಿಯ ಪರಿಸ್ಥಿತಿ ಉಂಟಾಗಿತ್ತು. ಕಾಂಗ್ರೆಸ್(ಐ) ಪರ ಪತ್ರಿಕೆಗಳು ಎಡ-ಪ್ರಜಾಸತ್ತಾತ್ಮಕ ಸಂಯುಕ್ತರಂಗ ಸದ್ಯದಲ್ಲೇ ಮುರಿದು ಬೀಳಲಿದೆಯೆಂದು ಭವಿಷ್ಯ ನುಡಿದಿದ್ದವು. ಕಾಂಗ್ರೆಸ್ ಚಿಹ್ನೆಯ ವಿವಾದದಲ್ಲಿ ಮುಖ್ಯ ಚುನಾವಣಾ ಕಮೀಶನರರ ತೀರ್ಪು ಇದರ ಹಿನ್ನೆಲೆ.

ಏನುಮಾಡಬೇಕೆಂಬ ಪ್ರಶ್ನೆ ಕಾಂಗ್ರೆಸ್(ಯು) ನಾಯಕರೆದುರು ಬಂದಿತ್ತು. ತಮ್ಮ ಪಕ್ಷಕ್ಕೆ ಒಂದು ಹೊಸ ಹೆಸರು ಕೊಡಲು ಅವರು ಸಿದ್ಧರಿರಲಿಲ್ಲ. ಯಾಕೆಂದರೆ ಹಾಗೆ ಮಾಡಿದರೆ ತಮ್ಮ ಹಿಂದಿನ ಚರಿತ್ರೆಯನ್ನು ಸಂಪೂರ್ಣವಾಗಿ ಅವರು ಬಿಟ್ಟುಕೊಡಬೇಕಾಗುತ್ತಿತ್ತು. ಕಾಂಗ್ರೆಸ್‌ನ ಹೆಸರನ್ನು ಉಳಿಸಿಕೊಳ್ಳಬೇಕೆಂದು ಅವರ ಬಯಕೆ. ಹೀಗಾಗಬೇಕಾದರೆ "ಎರಡು ಕಾಂಗ್ರೆಸ್‌ಗಳ ವಿಲೀನ"ವಾಗಬೇಕೆಂದೂ ಸೂಚಿಸಲಾಯಿತು. ಆದರೆ ನಾಯಕತ್ವದ ಬಹುಭಾಗ ಇದಕ್ಕೆ ಸಿದ್ಧರಿರಲಿಲ್ಲ. ಆದರೂ ಅವರು ತಮ್ಮ ಪಕ್ಷವನ್ನು ಒಂದಾಗಿಡಲು ಇಂತಹದೊಂದು ಕ್ರಮ ಬಯಸಿದ್ದರು.

ಪಕ್ಷದ ಕಾರ್ಯಕರ್ತರು ಹಾಗೂ ನಾಯಕರ ನಡುವೆ ಅತೀವಗೊಂದಲ ವ್ಯಾಪಿಸಿತು. ಕೇರಳದಲ್ಲಿ ಕಾಂಗ್ರೆಸ್ಸಿಗರು ಒಟ್ಟಿಗೇ ಈಜಬೇಕು ಇಲ್ಲವೇ ಒಟ್ಟಿಗೇ ಮುಳುಗಬೇಕು ಎಂಬ ಕೆ.ಪಿ.ಸಿ.ಸಿ.(ಎಸ್ ಅಧ್ಯಕ್ಷ ಆ್ಯಂಟನಿಯವರ ನಿಲುವು ಎಡ-ಪ್ರಜಾಸತ್ತಾತ್ಮಕ ರಂಗದ ವಿರೋಧಿಗಳಲ್ಲಿ ಕೊನೆಗೂ ಸಿ.ಪಿ.ಐ.(ಎಂ) ನೊಂದಿಗೆ ಸಂಬಂಧ ಕಡಿದುಕೊಂಡು ಎರಡು ಕಾಂಗ್ರೆಸ್‌ಗಳ ವಿಲೀನಕ್ಕೆ ಪರವಾಗಿ ನಿರ್ಣಯವಾಗಬಹುದೆಂಬ ಆಸೆ ಚಿಗುರಿತು.

## ಚುರುಕಿನ ಪ್ರಯತ್ನ

ಭವಿಷ್ಯದ ಬಗ್ಗೆ ಅನಿಶ್ಚಿತತೆ ಇಲ್ಲಿ ಉಂಟಾಗಿರುವ ಒಂದು ತೊಂದರೆಯಾಗಿತ್ತು. ಕಾಂಗ್ರೆಸ್ (ಎಸ್) ಸಂಯುಕ್ತರಂಗದಿಂದ ಬೇರೆಯಾಗಿ ಕಾಂಗ್ರೆಸ್(ಐ)ನೊಂದಿಗೆ ಜತೆಗೂಡಿತು ಎಂದಿಟ್ಟುಕೊಳ್ಳೋಣ. ಆಗ 1969ರಲ್ಲಾದಂತೆ ಸಮ್ಮಿಶ್ರ ಸರಕಾರ ಮುರಿದು ಬಿದ್ದಾಗ ಹೊಸ ಸರಕಾರ ರಚಿಸಲು ಸಾಧ್ಯವಾಗುವಂತಹ ಉಪಯುಕ್ತ ಪರ್ಯಾಯ ರೂಪಗೊಳ್ಳಬಲ್ಲದೋ? ಈ ಸಾಧ್ಯತೆಯಿಲ್ಲದಿದ್ದರೆ ಸದ್ಯದ ಸಮ್ಮಿಶ್ರರಂಗದಿಂದ ದೂರವಾಗುವುದು ಮೂರ್ಖತನವಾಗುವುದು.

ಈ ತೊಂದರೆ ನಿವಾರಿಸಲು ಸದ್ಯದ ಸಮ್ಮಿಶ್ರರಂಗದಿಂದ ಈಗಿರುವ ಸ್ಥಿತಿಯಿಂದ ಅತೃಪ್ತರಾಗಿರುವ ಅಥವಾ ತಮ್ಮ ಸ್ಥಿತಿಯನ್ನು ಈಗಿರುವುದಕ್ಕಿಂತ ಉತ್ತಮಪಡಿಸುವ ಆಕಾಂಕ್ಷೆ ಹೊಂದಿರುವ ತತ್ವಗಳನ್ನು ಒಂದೆಡೆ ತರಲು ಚುರುಕಿನ ಪ್ರಯತ್ನಗಳು ನಡೆದವು. ಒಂದು ಸಮರ್ಥ ಪರ್ಯಾಯವನ್ನು ನಿರ್ಮಿಸಲು ಎಲ್ಲಾ ರೀತಿಯ ಸಮ್ಮಿಶ್ರಣಗಳನ್ನು ಪ್ರಯತ್ನಿಸಲಾಯಿತು. ಕಾಂಗ್ರೆಸ್ (ಎಸ್) ಸಮ್ಮಿಶ್ರ ಸರಕಾರವನ್ನು ಒಮ್ಮೆ ಬಿಟ್ಟಿತೆಂದರೆ ಬೆನ್ನಹಿಂದೆಯೇ ಕೇರಳ ಕಾಂಗ್ರೆಸ್ (ಎಂ) ಹಾಗೂ ಅಖಿಲಭಾರತ ಮುಸ್ಲಿಂಲೀಗ್ ಕೂಡಾಹೊರಟುಬಿಡಬಹುದು. ಎಡ-ಪ್ರಜಾಸತ್ತಾತ್ಮಕರಂಗದ ವಿರೋಧಿಗಳಾದಕ್ಷಿ ಪ್ರಮುಖ ಮಲಯಾಳಂ ಹಾಗೂ ಇಂಗ್ಲೀಷ್ ಪತ್ರಿಕೆಗಳ "ವಿಶೇಷ ವರದಿಗಾರರು", "ರಾಜಕೀಯ ಟೀಕಾಕಾರರು" ಈ ಪಕ್ಷ ಅಥವಾ ಆ ಪಕ್ಷ ಹೇಗೆ ಈ ಅಂತ್ಯಧ್ಯೇಯದೆಡೆಗೆ ಮುಂದುವರಿಯುತ್ತಿವೆ ಎಂಬ ಬಗ್ಗೆ ಕಥೆಗಳನ್ನು ಹೆಣೆಯಲಾರಂಭಿಸಿದರು. ರಂಗದೊಳಗಿದ್ದ "ಪ್ರಜಾಸತ್ತಾತ್ಮಕ ಪಕ್ಷ"ಗಳಿಗೆ-ಕಾಂಗ್ರೆಸ್(ಎಸ್) ಅಲ್ಲದ, ಕೇರಳ ಕಾಂಗ್ರೆಸ್ (ಎಂ) ಹಾಗೂ ಅಖಿಲಭಾರತ ಮುಸ್ಲಿಂಲೀಗ್ ಇದರಲ್ಲಿ ಸೇರಿವೆ-1969ನ್ನು ಮತ್ತೆ ನಡೆಸುವುದನ್ನು ಬಿಟ್ಟು ಬೇರೆ ಮಾರ್ಗವಿಲ್ಲ ಎಂದು ಅವರೆಲ್ಲಾ ನಿರ್ಧಾರಕ್ಕೆ ಬಂದರು.

ಆ ನಿರೀಕ್ಷೆ ಇಂದು ಚೂರುಚೂರಾಗಿದೆ. ಆಗಸ್ಟ್ ಕೊನೇ ವಾರದಲ್ಲಿ ಸಭೆ ಸೇರಿದ ಕಾಂಗ್ರೆಸ್ (ಎಸ್)ನ ಅಖಿಲಭಾರತ ಕಾರ್ಯಕಾರಿ ಸಮಿತಿ ವಿರೋಧ ಪಕ್ಷಗಳೊಂದಿಗೆ, ವಿಶೇಷವಾಗಿ ಎಡಪಕ್ಷಗಳೊಂದಿಗೆ ಸಹಕಾರದ ಸಂಬಂಧ ಏರ್ಪಡಿಸಿಕೊಳ್ಳಬೇಕೆಂದು ಕೈಗೊಂಡ ನಿರ್ಧಾರ ಎರಡು ಕಾಂಗ್ರೆಸ್‌ಗಳ ವಿಲೀನವಾಗಬೇಕೆನ್ನುತ್ತಿರುವವರಿಗೆ ತಾತ್ಕಾಲಿಕ ನಿರಾಸೆಯನ್ನುಂಟುಮಾಡಿತು. ಕೆ.ಪಿ.ಸಿ.ಸಿ.(ಎಸ್) ಅಧ್ಯಕ್ಷ ಆ್ಯಂಟನಿ ಹಾಗೂ ಅವರ ಇತರ ಸಹಚರರು ರಂಗದೊಳಗಿನ ಸಮಸ್ಯೆ ಹಾಗೂ ತೊಂದರೆಗಳನ್ನು ರಂಗದೊಳಗೇ ಚರ್ಚಿಸಿ ಪರಿಹರಿಸಬಹುದು ಹಾಗೂ ಕಾಂಗ್ರೆಸ್ (ಎಸ್) ಸಮ್ಮಿಶ್ರ ಸರಕಾರವನ್ನು ಮುರಿದುಬೀಳಿಸುವ ಕೆಲಸದಲ್ಲಿ ಪಾಲ್ಗೊಳ್ಳದು ಎಂದು ಸ್ಪಷ್ಟಪಡಿಸಿದರು.

## ಆಹ್ವಾನದ ನಿರಾಕರಣೆ

ಇತ್ತೀಚಿನ ಹೇಳಿಕೆಗಳಲ್ಲೂ ಆ್ಯಂಟನಿ ತನ್ನ ನಿಲುವನ್ನು ಪುನಃ ಪ್ರತಿಪಾದಿಸಿದ್ದಾರೆ: "ಕಾನೂನು ಹಾಗೂ ವ್ಯವಸ್ಥೆ ಸಮಸ್ಯೆ" ಎಂದು ಅವರು ಕರೆದಿರುವುದರ ಕೆಲವಂಶಗಳ ವಿರುದ್ಧ ಅಭಿಪ್ರಾಯ ವ್ಯಕ್ತಪಡಿಸುತ್ತಲೇ ಕಾಂಗ್ರೆಸ್ (ಐ) ನಾಯಕರ ಆಹ್ವಾನವನ್ನು ತಿರಸ್ಕರಿಸಿದ್ದಾರೆ. ಫಲಿತಾಂಶವೆಂದರೆ ಕೇರಳದ ಕಾಂಗ್ರೆಸ್ (ಎಸ್) ನಾಯಕರನ್ನು ಭೇಟಿಯಾಗಿ ಅವರನ್ನು ಕಾಂಗ್ರೆಸ್ (ಐ)ಗೆ ಸೇರಿಸಿಕೊಳ್ಳುವ ಬಗ್ಗೆ ಮಾತನಾಡುತ್ತೇನೆ ಎಂದು ಕೊಚ್ಚಿ ವಿಮಾನ ನಿಲ್ದಾಣದಲ್ಲಿ ಇಳಿದಾಗ ಘೋಷಿಸಿದ್ದ ಕಾಂಗ್ರೆಸ್ (ಐ) ಮಹಾಕಾರ್ಯದರ್ಶಿ ಕಲ್ಪನಾಥ್ ರಾಯ್ ಅವರಲ್ಲಿ ಯಾರನ್ನೂ ಭೇಟಿ ಮಾಡಲಾಗಲಿಲ್ಲ. ಮಾತ್ರವಲ್ಲ, ಅವರನ್ನು ಭೇಟಿಮಾಡುತ್ತೇನೆಂದು ಆಕಾಂಕ್ಷೆಯನ್ನು ವ್ಯಕ್ತಪಡಿಸಲೇ ಇಲ್ಲವೆಂದು ಆಮೇಲೆ ನಿರಾಕರಿಸಿದರು.

ಸಿ. ಪಿ. ಐ. (ಎಂ) ಬಗ್ಗೆ ಹೇಳುವುದಾದರೆ, ಎಡ-ಪ್ರಜಾಸತ್ತಾತ್ಮಕ ರಂಗದೊಳಗಿನ ಪರಸ್ಪರ ಸಂಬಂಧಗಳ ಪ್ರಶ್ನೆಗಳನ್ನೆಲ್ಲಾ ಪರಸ್ಪರ ಚರ್ಚೆಗಳ ಮೂಲಕ ಪರಿಹರಿಸಿಕೊಳ್ಳಲು ಸಿದ್ಧ. ಆದರೆ ಇಂತಹ ಚರ್ಚೆಗಳು ಬಹಿರಂಗ ವ್ಯವಹಾರಗಳಾಗಬಾರದು ಎಂದು ಸಿ. ಪಿ. ಐ. (ಎಂ) ನಾಯಕರು ಸ್ಪಷ್ಟಪಡಿಸಿದ್ದಾರೆ. ಸರಕಾರದ ಕೆಲಸದ ಒಂದಂಶ- ಸಿ. ಪಿ. ಐ.(ಎಂ) ಮಂತ್ರಿಗಳ ಅಧೀನವಿರುವ ಇಲಾಖೆಗಳ ಕಾರ್ಯನಿರ್ವಹಣೆ-ಬಗ್ಗೆ ಕಾಂಗ್ರೆಸ್ (ಎಸ್)ನ ದೂರುಗಳು, ತೊಂದರೆಗಳಿದ್ದರೆ ಸಿ.ಪಿ.ಐ.(ಎಂ)ಗೂ ಕಾಂಗ್ರೆಸ್ (ಎಸ್)ನ ಅಧೀನವಿರುವ ಇಲಾಖೆಗಳಿಗೆ ಸಂಬಂಧಪಟ್ಟಂತೆ ಸರಕಾರದ ಕಾರ್ಯನಿರ್ವಹಣೆಯ ಬಗ್ಗೆ ಹೇಳಬೇಕಾದ ಕೆಲವು ತೊಂದರೆಗಳಿವೆ. ಅಲ್ಲದೆ, ಯಾವ ವಿಷಯಗಳ ಮೇಲೆ ಈ ಎರಡು ಪಕ್ಷಗಳ ನಡುವೆ

ವಿವಾದ ಹಾಗೂ ಭಿನ್ನಾಭಿಪ್ರಾಯ ಇವೆಯೋ ಅವು ಕೈಗಾರಿಕಾ ಹಾಗೂ ಕೃಷಿ ಕಾರ್ಮಿಕರು, ದುಡಿಯುವ ರೈತಸಮೂಹ, ಸರಕಾರೀ ನೌಕರರೂ ಸೇರಿದಂತೆ ಮಧ್ಯಮವರ್ಗದ ನೌಕರರು ಇತ್ಯಾದಿಯವರಿಗೆ ಅತೀ ಮಹತ್ವದ ವಿಷಯಗಳು.

## ಕಾನೂನು ಮತ್ತು ವ್ಯವಸ್ಥೆಯ ಪ್ರಶ್ನೆ

ಕಾನೂನು ಮತ್ತು ವ್ಯವಸ್ಥೆಯ ಪ್ರಶ್ನೆಯನ್ನೇ ತೆಗೆದುಕೊಳ್ಳಿ. ರಂಗದ ಒಳಗೆ ಪಾಲ್ಗೊಂಡವರಲ್ಲಿ ಹಾಗೂ ವಿರೋಧ ಪಕ್ಷಗಳಲ್ಲಿನ ಸಿ. ಪಿ. ಐ. (ಎಂ) ವಿರೋಧಿಗಳು ನಡೆಸಿರುವ ಪ್ರಚಾರವನ್ನು ಯಾರಾದರೂ ನಂಬುವುದಾದರೆ ಶಾಂತಿಭಂಗಮಾಡುವ ಅಪರಾಧಿಗಳು ಸಿ. ಐ. ಟಿ. ಯು. ಕಾರ್ಮಿಕರು ಹಾಗೂ ಕೃಷಿಕಾರ್ಮಿಕರು ಎಂದು ಭಾವಿಸಬೇಕು. ಈ ಎರಡು ವಿಭಾಗಗಳು "ಸಮಾಜ ವಿರೋಧೀ ಶಕ್ತಿ"ಯಾಗಿ ಬೆಳೆದಿವೆ ಹಾಗೂ "ಶಾಂತಿಪ್ರಿಯ ಜನರಿಗೆ ಕಂಟಕ"ರಾಗಿದ್ದಾರೆ. ಈ ಭಾವನೆ ನಿಜಸಂಗತಿಗಳಿಗೆ ವಿರುದ್ಧವಾಗಿದೆ.

ಸಿ.ಐ.ಟಿ.ಯು. ಕಾರ್ಯಕರ್ತರು ಹಾಗೂ ಕೃಷಿಕಾರ್ಮಿಕರ ಸಂಘಟನೆ, ಕೆಲವು ಸ್ಥಳಗಳಲ್ಲಿ ಕೃಷಿಕಾರ್ಮಿಕರು ಹಾಗೂ ಅವರ ಮಾಲೀಕರೂ ಸೇರಿದಂತೆ ನೌಕರರು ಹಾಗೂ ಮಾಲೀಕರ ನಡುವಿನ ವಿವಾದಗಳ ಪರಿಹಾರಕ್ಕೆ ಸಹಾಯಕವಾಗಲಾರದ ರೀತಿಯಲ್ಲಿ ವರ್ತಿಸಿರಬಹುದು. ಇಂತಹವೆಲ್ಲಾ ಸಮಸ್ಯೆಗಳನ್ನು ಚರ್ಚಿಸಿ ಸೂಕ್ತ ಪರಿಹಾರ ಪಡೆಯಲು ಸಿ.ಪಿ.ಐ. (ಎಂ) ಸಿದ್ಧವಿದೆ. ಹೇಗಿದ್ದರೂ ಕೈಗಾರಿಕಾ, ವ್ಯಾಪಾರ ಹಾಗೂ ಕೃಷಿ ಕ್ಷೇತ್ರಗಳಲ್ಲಿನ ಮಾಲೀಕರು ಕಾಂಗ್ರೆಸ್-(ಐ) ನೇತೃತ್ವದ ವಿರೋಧ ಪಕ್ಷಗಳ ವಿಚ್ಛಿದ್ರಕಾರೀ ಚಟುವಟಿಕೆಗಳನ್ನು ಹಾಗೂ ಕಾಂಗ್ರೆಸ್ (ಎಸ್) ನಂತಹ ಪಕ್ಷಗಳ ಸಿ. ಪಿ. ಐ. (ಎಂ)ವಿರೋಧೀ ಪೂರ್ವಾಗ್ರಹಗಳನ್ನು ಉಪಯೋಗಿಸಿಕೊಂಡು ತಮ್ಮ ನ್ಯಾಯಬದ್ಧ ಕೇಳಿಕೆಗಳಿಗಾಗಿ ಹೋರಾಡುತ್ತಿರುವ ಕಾರ್ಮಿಕರ ಮೇಲೆ ದಾಳಿ ನಡೆಸುತ್ತಿದ್ದಾರೆ ಎಂಬ ವಾಸ್ತವ ಸಂಗತಿಯಂತೂ ಉಳಿದೇ ಉಳಿಯುತ್ತದೆ. ಸ್ವಾಭಾವಿಕವಾಗಿಯೇ ಕಾರ್ಮಿಕರು ಹಾಗೂ ಸಿ ಐ. ಟಿ. ಯು. ನಂತಹ ಅವರ ಸಂಘಟನೆಗಳು ಮತ್ತು ಕೃಷಿಕಾರ್ಮಿಕರ ಸಂಘ ಇದನ್ನು ಪ್ರತಿಭಟಿಸುತ್ತದೆ. ಸಿ. ಪಿ. ಐ. (ಎಂ) ಸ್ವಾಭಾವಿಕವಾಗಿಯೇ ಅವರಿಗೆ ಬೆಂಬಲವಾಗಿ ನಿಲ್ಲುತ್ತದೆ.

ಈ ಸಂದರ್ಭದಲ್ಲಿ ಕಾರ್ಮಿಕ ಇಲಾಖೆಯ ವ್ಯವಹಾರ ವಹಿಸಿಕೊಂಡಿರುವ ಮಂತ್ರಿ ಒಬ್ಬ ಕಾಂಗ್ರೆಸ್ಸಿಗರು ಎಂಬುದನ್ನು ಗಮನಿಸಬೇಕು. ಅವರು ಐ. ಎನ್. ಟಿ. ಯು. ಸಿ.ಯನ್ನು ಬಲಗೊಳಿಸಿ ಸಿ. ಐ. ಟಿ. ಯು. ಹಾಗೂ ಎ. ಐ. ಟಿ. ಯು. ಸಿ. ಸೇರಿದಂತೆ ಇತರ ಸಂಘಟನೆಗಳನ್ನು ದುರ್ಬಲಗೊಳಿಸಲು ತನ್ನ ಹುದ್ದೆಯನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ ಎಂಬ ದೂರುಗಳಿವೆ. ಕೃಷಿಕಾರ್ಮಿಕರ ಸಂಘಟನೆಗಳಂತೂ ನಿವೃತ್ತಿ ವೇತನಕ್ಕೆ ಸಂಬಂಧಪಟ್ಟಂತೆ ಸರಕಾರ ತನ್ನ ಘೋಷಣೆಯನ್ನು ಪರಿಪಾಲಿಸದಿರುವ ಅಥವಾ ಪರಿಪಾಲಿಸಿದರೂ ಕಾಂಗ್ರೆಸ್ (ಎಸ್)ನ ಹಿಂಬಾಲಕರಲ್ಲದ ಹಲವು ಸಹಸ್ರ ಜನರಿಗೆ ಈ ಸೌಲಭ್ಯವನ್ನು ನಿರಾಕರಿಸುವ ರೀತಿಯ ವಿರುದ್ಧ ರಾಜ್ಯಾದ್ಯಂತ ಚಳುವಳಿ ನಡೆಸುತ್ತಿವೆ.

"ರೈತರನ್ನು ರಕ್ಷಿಸುವ" ಹೆಸರಲ್ಲಿ ಕೃಷಿಕಾರ್ಮಿಕರ ಚಳುವಳಿಯನ್ನು ವಿರೋಧಿಸುವಲ್ಲಿ ವಿರೋಧ ಪಕ್ಷಗಳೊಂದಿಗೆ ಕಾಂಗ್ರೆಸ್ (ಎಸ್)ಕೂಡಾ ಕೈಮಿಲಾಯಿಸಿರುವುದು ಆಶ್ಚರ್ಯದ ಸಂಗತಿ. ವಾಸ್ತವದಲ್ಲಿ ಸಿ.ಪಿ.ಐ.(ಎಂ) ಕೆಲಸ ಮಾಡುತ್ತಿರುವ ಕಿಸಾನ್‌ಸಭಾ ರಾಜ್ಯದ ಅತೀ ದೊಡ್ಡ ರೈತ ಸಂಘಟನೆ. ನಂತರ ಸಿ. ಪಿ. ಐ. ನಾಯಕತ್ವದ ಕಿಸಾನ್ ಸಭಾ ಬರುತ್ತದೆ. ಸಿ. ಪಿ. ಐ.(ಎಂ)ಆಗಲೀ, ಸಿ. ಪಿ.ಐ. ಆಗಲೀ ರೈತರನ್ನು ಕೃಷಿಕಾರ್ಮಿಕರಿಂದ "ಕಾಪಾಡಬೇಕು" ಎಂಬ ನಿಲುವು ತಳೆದಿಲ್ಲ.

ಈ ಹಿಂದಿನ ದಿನಗಳಲ್ಲಿ ಜೆನ್ಮಿ (ಜಮೀನ್‌ದಾರರು)ಗಳ ಹಿಡಿತಕ್ಕೆ ಒಳಗಾಗಿದ್ದ ಇಂತಹ ಕ್ಷೇತ್ರಗಳಲ್ಲಿ ರೈತರಿಗೆ ರಕ್ಷಣೆ ಬೇಕಾಗಿದ್ದದ್ದು ಈ ಊಳಿಗಮಾನ್ಯ ಭೂಮಾಲಕರಿಂದ. ಈಗ ಅವರಿಗೆ ರಕ್ಷಣೆ ಬೇಕಾಗಿರುವುದು ಈ ಹೊಸ ಗ್ರಾಮೀಣ ಸಭ್ಯ ಜನರಿಂದ. ಈ ಜನ ಕೃಷಿಕಾರ್ಮಿಕರ ನ್ಯಾಯಬದ್ಧ ಕೇಳಿಕೆಗಳನ್ನು ಮನ್ನಿಸದೆ ಅವರನ್ನು ಶೋಷಿಸುವುದು ಮಾತ್ರವಲ್ಲ ಹಣಕಾಸಿನ ಹಾಗೂ ವ್ಯಾಪಾರೀ ಸಂಸ್ಥೆಗಳ ಮೇಲಿನ ತಮ್ಮ ಹತೋಟಿಯನ್ನು ಮತ್ತು ಆಡಳಿತಾಧಿಕಾರಿಗಳ ಮೇಲೆ ಪ್ರಭಾವವನ್ನು ಉಪಯೋಗಿಸಿ ಬಹುಸಂಖ್ಯಾತ ದುಡಿಯುವ ರೈತರ ಹೊಟ್ಟೆಬಡಿದು ಶ್ರೀಮಂತರಾಗುತ್ತಿದ್ದಾರೆ.

ಶೋಷಣೆ ನಡೆಸುತ್ತಿರುವ ಈ ಗ್ರಾಮೀಣ ಸಭ್ಯ ಜನರ ವಿರುದ್ಧ ನಡೆಸುವ ಹೋರಾಟದಲ್ಲಿ ರೈತರು ಕೃಷಿಕಾರ್ಮಿಕರ ಸಹಕಾರ ಹಾಗೂ ಬೆಂಬಲ ಪಡೆಯಬೇಕು, ಕೃಷಿಕಾರ್ಮಿಕರು ರೈತರಿಂದ ಅದನ್ನು ಪಡೆಯಬೇಕು. ಕೃಷಿಕಾರ್ಮಿಕರ ವಿರುದ್ಧ "ರೈತ"ರನ್ನು ನಿಲ್ಲಿಸುವ ಪ್ರಯತ್ನದಲ್ಲಿ ಈ ಗೆಳೆಯರು ರೈತರ ಹಿತಾಸಕ್ತಿಗಳಿಗೇ ಅಪಾಯವೊಡ್ಡುತ್ತಿದ್ದಾರೆ.

ಸಿ.ಪಿ.ಐ.(ಎಂ) ಮತ್ತು ಕಾಂಗ್ರೆಸ್ (ಎಸ್) ನಡುವೆ ಮಾತ್ರವಲ್ಲದೆ ರಂಗದ ಇತರ ಅಂಗಪಕ್ಷಗಳ ನಡುವೆಯೂ ಭಿನ್ನಾಭಿಪ್ರಾಯವಿರುವ ಹಲವು ವಿಷಯಗಳಿವೆ. ಉದಾಹರಣೆಗೆ, ಸರಕಾರೀ ನೌಕರರ ಡೈಸ್‌ನಾನ್ ಪ್ರಶ್ನೆಯ ಮೇಲೆ ರಂಗದ ಅಂಗಪಕ್ಷಗಳು ತಳೆದ ನಿಲುವನ್ನು ಸಿ. ಪಿ. ಐ. (ಎಂ) ಒಪ್ಪುವುದಿಲ್ಲ. ಇದೇ ರೀತಿ ಕಾರ್ಮಿಕ ವರ್ಗ ಹಾಗೂ ರೈತರ ಚಳುವಳಿಗೆ ಮಹತ್ವಪೂರ್ಣವಾದ ಇನ್ನೂ ಹಲವು ಪ್ರಶ್ನೆಗಳ ಬಗ್ಗೆಯೂ ಕೂಡಾ.

## ಮೂಲಭೂತ ವಾಸ್ತವತೆ

ಕೇರಳದಲ್ಲಿ ಅಸ್ತಿತ್ವಕ್ಕೆ ಬಂದಂತಹ ವಿಶಾಲ ಸಮ್ಮಿಶ್ರ ಸರಕಾರದಲ್ಲಿ ಒಂದು ಅಂಗಪಕ್ಷದ ಅಭಿಪ್ರಾಯ ಇನ್ನೊಂದರ ಮೇಲೆ ಜಯಶೀಲವಾಗಬೇಕು ಎಂದು ನಿರೀಕ್ಷಿಸುವುದು ನಿಷ್ಪ್ರಯೋಜಕ. ಆದ್ದರಿಂದ ತಮ್ಮ ನಡುವಿನ ಭಿನ್ನಾಭಿಪ್ರಾಯದ ವಿಷಯಗಳ ಮೇಲೆ ಕೊಡು-ಕೊಳ್ಳುವ ಮಾರ್ಗವನ್ನು ಎಲ್ಲಾ ಅಂಗಪಕ್ಷಗಳು ಅನುಸರಿಸಬೇಕು. ಅದೇ ಸಮಯದಲ್ಲಿ ಪ್ರತಿಯೊಂದು ಪಕ್ಷಕ್ಕೂ ತನ್ನದೇ ಆದ ಸ್ವತಂತ್ರ ಚಳುವಳಿಗಳನ್ನು ನಡೆಸುವ ಸ್ವಾತಂತ್ರ್ಯವಿರಬೇಕು. ಇದರಲ್ಲಿ ಧೋರಣೆಗಳ ತಿಕ್ಕಾಟ ಬಂದೇ ಬರುತ್ತವೆ. ಸಿ. ಪಿ. ಐ. (ಎಂ)ಹಾಗೂ ಕಾಂಗ್ರೆಸ್ (ಎಸ್)ನಂತಹ ಎರಡು ಪಕ್ಷಗಳ ಮಟ್ಟಿಗಂತೂ ಇದು ಹೆಚ್ಚು ಸತ್ಯ. ಯಾಕೆಂದರೆ ಎರಡಕ್ಕೂ ತನ್ನದೇ ಆದ ಬೇರೆಬೇರೆ ಚರಿತ್ರೆಯಿದೆ. ಹಾಗೇನೇ ವರ್ತಮಾನ ಹಾಗೂ ಭವಿಷ್ಯದ ಬಗ್ಗೆ ತೀರಾ ಭಿನ್ನವಾದ ದೃಷ್ಟಿಕೋಣಗಳಿವೆ.

ಪರಿಸ್ಥಿತಿಯ ಈ ಮೂಲಭೂತ ವಾಸ್ತವತೆಗಳನ್ನು ಎಡ-ಪ್ರಜಾಸತ್ತಾತ್ಮಕ ರಂಗದ ಎಲ್ಲಾ ಅಂಗಪಕ್ಷಗಳು ಗಮನಕ್ಕೆ ತಗೊಂಡರೆ ಕೇರಳದಲ್ಲಿ ಅಸ್ಥಿರತೆ ತರುವ ಕಾಂಗ್ರೆಸ್ (ಐ) ಮಾಡುತ್ತಿರುವ ಪ್ರಯತ್ನಗಳನ್ನು ಈ ಹಿಂದಿನ ಅದರ ಪ್ರಯತ್ನಗಳಂತೆಯೇ ನಿರ್ಣಾಯಕವಾಗಿ ಸೋಲುತ್ತವೆ.

●

# ಸುಳ್ಯ ಮತ್ತು ಬೆಳ್ಳಾರೆಗಳಲ್ಲಿ ಎಸ್.ಎಫ್.ಐ. ಉದ್ಘಾಟನೆ

### ಸುಳ್ಯ

ದ.ಕ.ಜಿಲ್ಲಾ ಸುಳ್ಯತಾಲ್ಲೂಕಿನ ಏಕೈಕ ಕಾಲೇಜಾದ ಸುಳ್ಯ ನೆಹರು ಸ್ಮಾರಕ ಕಾಲೇಜಿನ ಎಸ್.ಎಫ್.ಐ. ಘಟಕದ ಉದ್ಘಾಟನೆಯನ್ನು ತಾ. 21-9-81 ರಂದು ನಡೆಸಲಾಯಿತು. ಕಾಂ. ಎ. ಎನ್. ಅಶೋಕ್ ಕುಮಾರ್ ರವರ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾರಂಭದಲ್ಲಿ ಸುಳ್ಯ ತಾಲೂಕು ಎಸ್.ಎಫ್. ಐ. ಯ ಪ್ರಧಾನಕಾರ್ಯದರ್ಶಿ ಕಾಂ. ಎಸ್. ಎ. ಮಹಮ್ಮದ್ ಕುಂಞ, ಕಾಂ. ಪಿ. ಸೀತಾಲಕ್ಷ್ಮಿ, ವಿದ್ಯಾರ್ಥಿ ಸಂಘಟನೆಯ ಬಗ್ಗೆ ಮಾತನಾಡಿದರು. ಕೊನೆಯಲ್ಲಿ 8 ಮಂದಿಯ ಸಮಿತಿಯನ್ನು ರಚಿಸಲಾಯಿತು.

ಸಮಿತಿಯ ಅಧ್ಯಕ್ಷ ಬಿ. ಕೆ. ಕೃಷ್ಣ ನಾಯಕ್, ಉಪಾಧ್ಯಕ್ಷ ಸಿ. ಎಮ್. ಇಬ್ರಾಹೀಂ, ಕಾರ್ಯದರ್ಶಿ ಮನಮೋಹನ್, ಸದಸ್ಯರು ಎ. ಎನ್. ಅಶೋಕ್ ಕುಮಾರ್, ಮೋಹನ್‌ಕುಮಾರ್, ಪಿ. ಸೀತಾಲಕ್ಷ್ಮಿ, ದಯಾನಂದ, ಆದಂಕುಂಞ.

### ಬೆಳ್ಳಾರೆ

ಸುಳ್ಯ ತಾಲ್ಲೂಕು ಬೆಳ್ಳಾರೆ ಸರಕಾರಿ ಜೂನಿಯರ್ ಕಾಲೇಜಿನ ಎಸ್. ಎಫ್. ಐ. ಘಟಕದ ಉದ್ಘಾಟನೆಯನ್ನು 28-9-81 ರಂದು ಮಂಗಳೂರು ತಾಲ್ಲೂಕು ಎಸ್. ಎಫ್. ಐ ಸಮಿತಿಯ ಸದಸ್ಯರಾದ ಕಾ. ಪಿ. ನಿರಂಜನ್‌ರಾವ್‌ರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಉದ್ಘಾಟಿಸಿ ಮಾತನಾಡಿದ ಕಾ. ಪಿ. ಉಮೇಶಭಂಡಾರಿ ಸಂಘಟನೆಯ ಧ್ಯೇಯ, ಧೋರಣೆ, ಕಾರ್ಯಕ್ರಮಗಳನ್ನು ವಿವರಿಸಿದರು. ಮುಖ್ಯ ಅತಿಥಿ ಕಾಂ. ಪಿ. ಸಿ. ಜಾಯ್ ಮಾತನಾಡಿ "ವಿದ್ಯಾರ್ಥಿಗಳು ಮತ್ತು ಸಾಮಾಜಿಕ ಸಂಬಂಧ, ಸಂಘಟನೆ ಮಹತ್ವ" ವನ್ನು ವಿವರಿಸಿದರು. ಎಸ್. ಎಫ್. ಐ. ಯ ಸುಳ್ಯ ತಾಲ್ಲೂಕು ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಂ. ಎಸ್. ಎ. ಮುಹಮ್ಮದ್ ಕುಂಞ ಸಭೆಯಲ್ಲಿ ಮಾರ್ಗದರ್ಶನ ನೀಡಿದರು.

ಜೂನಿಯರ್ ಕಾಲೇಜಿನ ಆವರಣದಲ್ಲಿ ನಡೆದ ಈ ಸಮಾರಂಭಕ್ಕೆ ದ. ಕ ಜಿಲ್ಲಾ ಡಿ. ವೈ. ಎಫ್. ಐ. ಖಜಾಂಚಿ ಕಾಂ. ಭುಜಂಗಮಾರ್ಲ, ಸುಳ್ಯ ರೈತಸಂಘದ ಪ್ರಧಾನಕಾರ್ಯದರ್ಶಿ ಕಾಂ. ಕೆ. ಮೋನಪ್ಪಗೌಡ, ಜಿಲ್ಲಾ ಎಸ್.ಎಫ್.ಐ ಸಮಿತಿಸದಸ್ಯ ನಝೀರ್ ಅಹ್ಮದ್, ಸುಳ್ಯ ತಾಲ್ಲೂಕು ಎಸ್.ಎಫ್.ಐ. ಮಹಿಳಾ ಘಟಕದ ಸಂಚಾಲಕಿ ಕಾಂ. ಪಿ. ಸೀತಾಲಕ್ಷ್ಮಿ, ಸುಳ್ಯ ತಾಲೂಕು ಎಸ್. ಎಫ್.ಐ. ಯ ಉಪಕಾರ್ಯದರ್ಶಿನಿ ಕಾಂ. ಕೆ. ಬಿ. ಲೀಲಾವತಿ ಮುಂತಾದವರು ಭಾಗವಹಿಸಿದ್ದರು.

ಕಾಂ. ಲಕ್ಷ್ಮಿನಾರಾಯಣನವರ ಸ್ವಾಗತದೊಂದಿಗೆ ಆರಂಭವಾಗಿ, ಕೆ. ವಸಂತನವರು ವಂದಿಸುವುದರೊಂದಿಗೆ ಸಭೆ ಮುಕ್ತಾಯವಾಯಿತು.

ಆಯ್ಕೆಯಾದ ಸಮಿತಿ ಸದಸ್ಯರು: ಅಧ್ಯಕ್ಷ ಪಿ. ಸಾಂತಪ್ಪರೈ, ಕಾರ್ಯದರ್ಶಿ ಕೆ. ವಸಂತನ್ಯಾಕ್ ಜೊತೆ ಕಾರ್ಯದರ್ಶಿ ಕೆ. ದನಂಜಯ ಮತ್ತು 6 ಮಂದಿ ಸಮಿತಿ ಸದಸ್ಯರು.

●

# ಹಕ್ಕುಗಳ ರಕ್ಷಣೆಗಾಗಿ ಹೋರಾಡಲು ಮಹಿಳೆಯರಿಗೆ ಕರೆ

ದ.ಕ. ಜಿಲ್ಲೆಯ ಉಡುಪಿ ತಾಲ್ಲೂಕಿನಲ್ಲಿ ತಾ. 27-9-1981 ರಂದು ಮಹಿಳೆಯರ ವಿಸ್ತೃತ ಸಭೆಯು ಕುಮಾರಿ ವಾರಿಜನವರ ಅಧ್ಯಕ್ಷತೆಯಲ್ಲಿ ನಡೆಯಿತು. ಕುಮಾರಿ ಶುಭದಾನವರು ಮಹಿಳೆಯರನ್ನು ಸ್ವಾಗತಿಸಿ ಮಾತನಾಡಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಕರ್ನಾಟಕ ರಾಜ್ಯಸಮಿತಿಯ ಅಧ್ಯಕ್ಷೆ ಶ್ರೀಮತಿ ದೇವಕಿ ವಾರಿಯರ್ ಅವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಶತಮಾನಗಳಿಂದಲೂ ಮಹಿಳೆ ಅತ್ಯಾಚಾರ, ದೌರ್ಜನ್ಯಗಳಿಗೆ ತುತ್ತಾಗುತ್ತಲೇ ಬಂದು, ಗಂಡಸರ ನಡುವೆ, ಜಮೀನ್ದಾರ ಆಳುಗಳ ನಡುವೆ, ಮನೆತನಗಳ ನಡುವೆ, ಜಾತಿಗಳ ನಡುವೆ, ಜಗಳಗಳು ಉಂಟಾಗುವಾಗ ದ್ವೇಷ, ಸೇಡಿಗೆ ಹೆಂಗಸರು ಬಲಿಯಾಗುತ್ತಾರೆ. ಇಂತಹ ಪ್ರಕರಣಗಳಲ್ಲಿ ಹೆಚ್ಚಿನವರು ಆಪಾದಿತರ ಪರವಾಗಿಯೇ ವರ್ತಿಸುವುದರಿಂದ ನೊಂದ ಮಹಿಳೆಯರಿಗೆ ನ್ಯಾಯ, ರಕ್ಷಣೆಯು ಸಿಗುವುದಿಲ್ಲ. ಸಮಾಜದಲ್ಲಿ ಗೌರವದಿಂದ ಬಾಳಬೇಕಾದರೆ ಮಹಿಳೆಯರು ಸಂಘಟಿತರಾಗಿ ತಮ್ಮ ಹಕ್ಕುಗಳ ರಕ್ಷಣೆಗಾಗಿಯೂ, ಸಮಸ್ಯೆಗಳ ಪರಿಹಾರಕ್ಕಾಗಿಯೂ ಹೋರಾಟ ನಡೆಸಲು ಮುಂದಾಗಬೇಕೆಂದು ಕರೆ ನೀಡಿದರು.

ಅನಂತರ ಮಹಿಳಾ ಸಂಘಟನೆಯ ಕಾರ್ಯಕರ್ತೆ ಕುಮಾರಿ ಸುಶೀಲಾ ಅವರು ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸುತ್ತಾ ಮಹಿಳೆಯರ ಮೇಲಿನ ಸಾಮಾಜಿಕ ಅನ್ಯಾಯಗಳ ವಿರುದ್ಧ, ಸಮಾನ ಹಕ್ಕುಗಳಿಗಾಗಿ ಮತ್ತು ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಸಂಘಟಿತ ಹೋರಾಟ ನಡೆಸಬೇಕೆಂದು ಹೇಳಿದರು.

ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಉಡುಪಿ ತಾಲ್ಲೂಕು ಸಮಿತಿಯನ್ನು ರಚಿಸಲಾಯಿತು. ಹದಿನೈದು ಮಂದಿ ಇರುವ ಈ ಸಂಘಟನಾ ಸಮಿತಿಗೆ ಸಂಚಾಲಕಿಯಾಗಿ ಕುಮಾರಿ ಪ್ರೇಮನವರನ್ನು ಮತ್ತು ಸಹಾಯಕ ಸಂಚಾಲಕಿಯಾಗಿ ಕುಮಾರಿ ಶುಭದಾ ಇವರನ್ನು ಆಯ್ಕೆ ಮಾಡಲಾಯಿತು.

●

-ಎನ್ಕೆ

# ಕರ್ನಾಟಕ ರಾಜ್ಯದಲ್ಲಿ

# ಸರಕಾರದ ಅಧಕ್ಷತೆ! ಜನರ ನಿರ್ಜೀವತೆ?

ಮಂಗಳೂರಿನ ದಿ. ಶ್ರೀನಿವಾಸ ಮಲ್ಯ, ಗುಲ್ಬರ್ಗದ ದಿ. ರಾಮಪುರೆಯವರನ್ನು ಬಿಟ್ಟರೆ ಕೇಂದ್ರ ಸರಕಾರದ ಮೇಲೆ ಪ್ರಭಾವ ಬೀಳುವಂತೆಮಾಡಿ ಕರ್ನಾಟಕದ ಅಭಿವೃದ್ಧಿ ಕೆಲಸಗಳೂ, ಕೈಗಾರಿಕೋದ್ಯಮಗಳೂ ತಲೆಎತ್ತುವಂತೆ ಮಾಡುವ ಮುಖಂಡರು ಎದ್ದು ಕಾಣಿಸುತ್ತಿಲ್ಲ. ಈ ಹಿಂದೆ ನಿಜಲಿಂಗಪ್ಪ, ದೇವರಾಜ ಅರಸರು ಹಾಗೆಯೇ ಈಗ ಗುಂಡೂರಾವ್, ಎಫ್.ಎಂ. ಖಾನ್, ಜಾಫರ್‌ಶರೀಫ್‌ರೆಲ್ಲ ಇಂದಿರಾಗಾಂಧಿಗೆ ಅತಿ ನಿಕಟವರ್ತಿಗಳಾಗಿದ್ದಾರೆ. ಆದರೆ ವಿಜಯನಗರ ಉಕ್ಕು ಕಾರ್ಖಾನೆ, ಮಂಗಳೂರಿನ ಉಕ್ಕು ಕಾರ್ಖಾನೆ, ಮಂಗಳೂರಿನ ತೈಲಾಗಾರ, ಕಾರವಾರ ಬಂದರ, ಮುಂಬಯಿ-ಮಂಗಳೂರು ಕರಾವಳಿ ರೈಲ್ವೆ, ಕರ್ನಾಟಕ ರಾಜ್ಯದ ಮೀಟರ್‌ಗೇಜ್ ರೇಲ್ವೆಯನ್ನು ಬ್ರಾಡ್‌ಗೇಜ್ ಮಾಡಿಸುವುದು, ಹೊಸ ರೇಲ್ವೆ ಹಾಕಿಸುವುದು, ಮಂಗಳೂರಿನಲ್ಲಿ ದೊಡ್ಡ ವಿಮಾನ ನಿಲ್ದಾಣ, ಹುಬ್ಬಳ್ಳಿಯಲ್ಲಿ ಹೊಸ ವಿಮಾನ ನಿಲ್ದಾಣ, ಕಾಳೀ ನದಿಯ ಕಾರವಾರ ಸೇತುವೆ, ನೀರಾವರಿ ಯೋಜನೆಗಳು, ವಿದ್ಯುತ್ ಘಟಕಗಳು, ರಾಷ್ಟ್ರೀಯಹೆದ್ದಾರಿಗಳು, ಬಹಳ ಹಿಂದುಳಿದ ಪ್ರದೇಶಗಳಲ್ಲಿ ಕೈಗಾರಿಕೋದ್ಯಮ ಬೆಳವಣಿಗೆ, ಮಲೆನಾಡು ಅಭಿವೃದ್ಧಿ-ಇವೆಲ್ಲ ಕೆಲಸಗಳ ಗತಿ ದುರ್ಗತಿಯೇ ಸರಿ.

ವಿಜಯನಗರ ಉಕ್ಕು ಕಾರ್ಖಾನೆಯ ಕುರಿತು ಸೆಪ್ಟೆಂಬರ್ ಒಂದೇ ತಿಂಗಳಲ್ಲಿ ವಿಭಿನ್ನ ಅಭಿಪ್ರಾಯದ ನಾಲ್ಕು ಹೇಳಿಕೆಗಳು, ಮಂಗಳೂರಿನ ತೈಲಶುದ್ಧೀಕರಣ ಕೇಂದ್ರದ ಕುರಿತು ಹುಚ್ಚರಾಟದ ಪ್ರಕಟಣೆಗಳನ್ನು ಓದುತ್ತಿದ್ದೇವೆ. ರೇಲ್ವೆ ಮಂತ್ರಿಯಾಗಿ ಡಬ್ಬಲ್ ಡೆಕ್ಕರ್ ರೇಲ್ವೆ ಪ್ರಾರಂಭ ಮಾಡಿ ಬಂದುಮಾಡಿದ ಜಾಫರ್ ಶರೀಫರಾಗಲೀ, ಕಾರ್ಮಿಕರ ಮುಷ್ಕರ ಮುರಿಯುವ ಎಫ್. ಎಂ. ಖಾನರಾಗಲೀ, ಬುಡೇಕಲ್ಲಿನಂತೆ ಆಡಳಿತೆ ನಡೆಸುವ ಗುಂಡೂರಾಯರಾಗಲೀ ಮೇಲೆ ನಮೂದಿಸಿರುವ ಜನರ ಸಮಸ್ಯೆಗಳನ್ನು ಪೂರೈಸಲು ಅಸಮರ್ಥರಾಗಿದ್ದಾರೆ. ಹಿಂದಕ್ಕೆ ನಿಜಲಿಂಗಪ್ಪ, ದೇವರಾಜ ಅರಸರು ಕರ್ನಾಟಕ ರಾಜ್ಯದಲ್ಲಿ ಇಂದಿರಾ ಕಾಂಗ್ರೆಸ್ ಪಕ್ಷವನ್ನೂ, ಪಕ್ಷದ ಆಡಳಿತೆಯನ್ನು ಭದ್ರವಾಗುಳಿಸುವ ಕರ್ತವ್ಯವನ್ನಷ್ಟೇ ಯಾವ ರೀತಿ ನೀಗಿಸಿಕೊಂಡು ಬಂದರೋ ರಾವ್, ಖಾನ್, ಶರೀಫರೂ ಅದೇ ದಾರಿಯಲ್ಲೇ ಮುನ್ನಡೆದಿದ್ದಾರೆ. ಇವರೆಲ್ಲ ವ್ಯಕ್ತಿನಿಷ್ಠೆಯಿಂದ ಇಂದಿರಾ ಪಕ್ಷವನ್ನೂ ತಮ್ಮ ಅಧಿಕಾರವನ್ನೂ ಕರ್ನಾಟಕದಲ್ಲಿ ಉಳಿಸಿಕೊಂಡು ನಡೆದಿರುವರಲ್ಲದೆ ಕನ್ನಡನಾಡಿನ ಅಭಿವೃದ್ಧಿಗೋಸ್ಕರ ಏನೂ ಮಾಡುತ್ತಿಲ್ಲ. ಜನರಾದರೂ ತುಂತಮ್ಮ ಸಾಂಸಾರಿಕ, ಆರ್ಥಿಕ ಸಮಸ್ಯೆಗಳಲ್ಲೇ ಮುಳುಗೇಳುತ್ತಿರುವರಲ್ಲದೆ, ಅಭಿವೃದ್ಧಿ ಕೆಲಸಗಳ ಕಡೆ ದೃಷ್ಟಿ ಹರಿಸುತ್ತಿಲ್ಲ, ಚಳುವಳಿ ಹೂಡುತ್ತಿಲ್ಲ.

## ವಿಜಯನಗರ ಉಕ್ಕುಕಾರ್ಖಾನೆ ನೆನೆಗುದಿಗೆ

"ವಿಜಯನಗರ ಉಕ್ಕು ಕಾರ್ಖಾನೆ ನನ್ನ ಅಧಿಕಾರಾವಧಿಯಲ್ಲಿ ಬರದೆ ಹೋದರೆ ನಾನು ಇನ್ನು ಮುಂದೆ ಚುನಾವಣೆಗೆ ನಿಲ್ಲುವುದೇ ಇಲ್ಲ. ರಾಜಕೀಯ ಸನ್ಯಾಸ ತೆಗೆದುಕೊಳ್ಳುತ್ತೇನೆ" ಎಂದು ಈ ಕ್ಷೇತ್ರದ ಲೋಕಸಭಾ ಸದಸ್ಯ ಆರ್. ವೈ. ಘೋರ್ಪಡೆಯವರ ಶಪಥ. "ಈಗ ನಮ್ಮ ಗುಂಡೂರಾವ್ ಸರಕಾರ ಮತ್ತು ಶಾಸಕರ, ಸಂಸತ್ ಸದಸ್ಯರ ಒಟ್ಟು ಪ್ರಯತ್ನದಿಂದಾಗಿ ಅದು ಪ್ರಧಾನಿಯವರ ಟೇಬಲ ಮೇಲಿದೆ. ಅವರು ವಿದೇಶಕ್ಕೆ ತೆರಳುವ ಮುನ್ನ ನಿರ್ಣಯ ಹೊರಬರುತ್ತದೆ" ಎಂದು ತಿಳಿಸಿದರು ಸೆಪ್ಟೆಂಬರ್ 18ರಂದು.

ವಿಜಯನಗರ ಉಕ್ಕು ಕಾರ್ಖಾನೆ ಸ್ಥಾಪನೆ ವಿಷಯದಲ್ಲಿ ಯಾವುದೇ ನಿರ್ಧಾರ ಕೈಗೊಳ್ಳುವುದನ್ನು ಕೇಂದ್ರ ಉಕ್ಕು ಮಂತ್ರಿ ಶಾಹಿ ಚಾಣಾಕ್ಷತನದಿಂದ ಮುಂದೂಡಿದೆ. ಆದರೆ ಈ ವಿಷಯವನ್ನು ಕರ್ನಾಟಕ ಸರಕಾರಕ್ಕೆ ತಿಳಿಸಿಲ್ಲ. (ಹೊಸದಿಲ್ಲಿ ಸೆ. 21)

ಸೆ. 23ರಂದು ಇಂದಿರಾಗಾಂಧಿಯವರು ವಿದೇಶಕ್ಕೆ ಹಾರಿಹೋಗಿದ್ದಾರೆ. ಆದರೆ ಉಕ್ಕು ಕಾರ್ಖಾನೆಗೆ ಸಂಬಂಧಪಟ್ಟ ಫ್ಯಾಯಿಲು ಮಾತ್ರ ರೆಕ್ಕೆಮುರಿದುಕೊಂಡು ಪ್ರಧಾನಿಯವರ ಟೇಬಲ್ ಮೇಲೆಯೇ ಬಿದ್ದಿದೆ.

ಆರಂಭದಲ್ಲಿ ಈ ಯೋಜನೆ ನಿರ್ಮಾಣಕ್ಕೆ ತಗಲುವ ವೆಚ್ಚ 1579 ಕೋಟಿ ರೂಪಾಯಿಗಳಾಗಿತ್ತು (1971ರಂದು ಇಂದಿರಾ ಅಮೃತ ಹಸ್ತದಿಂದ ಉದ್ಘಾಟಿಸಲ್ಪಟ್ಟಾಗ). ಉಕ್ಕು ಪ್ರಾಧಿಕಾರದ ಮನ್ನಣೆ ದೊರೆತ ಸಂದರ್ಭದಲ್ಲಿ ಅದು 2963 ಕೋಟಿಯಾಯಿತು. ಇನ್ನು ಮುಂದೆ 4000 ಕೋಟಿಗೂ ಮೀರುವುದೆಂಬ ಎಚ್ಚರಿಕೆಯನ್ನು ಕಾಂಗ್ರೆ ರಾಜ್ಯಸಭಾ ಸದಸ್ಯ ಬಾಸ್ಕರರಾಜು ನುಡಿದಿದ್ದಾರೆ.

ಆದರೆ ನಾವು ಒಂದು ಮಾತು ಹೇಳೋಣ. ವಿಜಯನಗರ ಉಕ್ಕು ಕಾರ್ಖಾನೆಗಾಗಿ ಆಳುವ ಪಕ್ಷ ಹೋರಾಟ ಪ್ರಾರಂಭಿಸಿದ್ದೇ ಆದರೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವೂ ಅದರಲ್ಲಿ ಪಾಲ್ಗೊಳ್ಳಲು ತಯಾರಿದೆ. ಹೋರಾಟವೋ- ಸನ್ಯಾಸವೋ- ಘೋರ್ಪಡೆ ಘೋಷಿಸಲಿ.

## ಮಂಗಳೂರು ತೈಲಾಗಾರ

ಹಲವಾರು ಹೋರಾಟಗಳ ನಂತರ ಮಂಗಳೂರು ನವಬಂದರ ಸ್ಥಾಪನೆಯಾಗಿದೆ. ಜನತಾ ಪಾರ್ಟಿ ಅಧಿಕಾರದಲ್ಲಿದ್ದಾಗ ಕುದುರೆಮುಖದಲ್ಲಿ ತಯಾರಾಗುವ ಕಬ್ಬಿಣದ ಅದಿರನ್ನು ಉಪಯೋಗಿಸಲು ಮಂಗಳೂರಿನಲ್ಲೇ ಚಿಕ್ಕ ಪ್ರಮಾಣದ ಉಕ್ಕು ಕಾರ್ಖಾನೆಯೊಂದನ್ನು ತಯಾರಿಸುವುದಾಗಿ ಜಾರ್ಜ್ ಫರ್ನಾಂಡೀಸರು ಘೋಷಿಸಿದ್ದರು. ಆದರದು ಗಾಳಿಯಲ್ಲಿ ಹಾರಿಹೋಯಿತು.

ತೈಲ ಶುದ್ಧೀಕರಣಕ್ಕೆ ನವಬಂದರ ಪ್ರದೇಶ ಅತ್ಯಂತ ಉತ್ತಮ ಪ್ರದೇಶವೆಂದು ತಿಳಿದೇ ಮಂಗಳೂರಿನಲ್ಲಿ ಶುದ್ಧೀಕರಣ ಕೇಂದ್ರ ಸ್ಥಾಪಿಸುವ ನಿರ್ಣಯವನ್ನು ಕೇಂದ್ರ ಸರಕಾರ ಕೈಗೊಂಡಿತ್ತು. ಕೇಂದ್ರ ಮಂತ್ರಿಗಳಲ್ಲೂ ಅಚ್ಚುಕಟ್ಟು ಪ್ರದೇಶ ಮಾಯವಾಗಿ, ಪ್ರಾದೇಶಿಕ ಸಂಕುಚಿತ ಭಾವನೆ ಮೂಡಿಬಂದರೆ ದೇಶದ ಬೆಳವಣಿಗೆಯಲ್ಲಿ ಸಮತೋಲತೆಯಾಗಲೀ, ಶೀಘ್ರ ಅಭಿವೃದ್ಧಿ ಕಾರ್ಯಗಳಾಗಲೀ ತಲೆ ಎತ್ತಲು ಸಾಧ್ಯವಿಲ್ಲ.

ಮಂಗಳೂರಿನಲ್ಲಿ ಸ್ಥಾಪನೆಯಾಗಬೇಕಾದ ತೈಲ ಶುದ್ಧೀಕರಣ ಕೇಂದ್ರವನ್ನು ಮಧ್ಯಪ್ರದೇಶದವರೇ ಆದ ಕೇಂದ್ರದ ಪೆಟ್ರೋಲಿಯಂ ಮಂತ್ರಿ ಸೇಠಿಯವರು ತಮ್ಮ ರಾಜ್ಯದಲ್ಲೇ ಸ್ಥಾಪಿಸುವ ವಿಚಾರದಲ್ಲಿದ್ದಾರಂತೆ. ಬಂದರು ಪ್ರದೇಶ ಪೆಟ್ರೋಲಿಯಂ ಶುದ್ಧೀಕರಣಕ್ಕೆ ಅನುಕೂಲ ಸ್ಥಳವೆಂದು ಗೊತ್ತಿದ್ದರೂ, ಸಾಹತುಕ ವ್ಯವಸ್ಥೆಗೆ ಅನಾನುಕೂಲವಾದ, ಹೆಚ್ಚು ಖರ್ಚಿಗೆ ಕಾರಣವಾಗುವ ಮಧ್ಯಪ್ರದೇಶಕ್ಕೆ ಅದನ್ನು ಬದಲಾಯಿಸುವುದು ಆರ್ಥಿಕ ದೃಷ್ಟಿಯಿಂದ ಸರಿಯಲ್ಲ. ಈ ತೈಲ ಶುದ್ಧಿಗಾರವನ್ನು ಬೇರೆ ಯಾವುದೇ ರಾಜ್ಯಕ್ಕೆ ವರ್ಗಾಯಿಸುವುದಕ್ಕೆ ತಮ್ಮ ಸರಕಾರ ಅವಕಾಶ ಕೊಡುವುದಿಲ್ಲೆಂದೂ, ಈ ಸಂಬಂಧದಲ್ಲಿ ಆದಷ್ಟು ಬೇಗ ಪ್ರಧಾನಿ ಇಂದಿರಾಗಾಂಧಿ ಅವರನ್ನು ಭೇಟಿ ಮಾಡುವುದಾಗಿಯೂ ಗುಂಡೂರಾವ್ ಸಾರಿದ್ದಾರೆ. ಆದರೆ ದಿಲ್ಲಿ ರಾಣಿಯ ಮೇಲೆ ಗುಂಡೂರಾಯರ ಪ್ರಭಾವ ಎಷ್ಟಿದೆಂಬ ವಿಷಯ ಈಗಾಗಲೇ ಬಯಲಾಗಿದೆ.ಆದ್ದರಿಂದ ಕರ್ನಾಟಕದ ಉಕ್ಕೂ ಹೋಯಿತು, ಪೆಟ್ರೋಲೂ ಹೋಯಿತು. ಗುಂಡೂರಾಯರಿಗೆ ಏನುಳಿಯಿತು? ಪಶ್ಚಿಮಘಟ್ಟದ ಮಲೆನಾಡೇ?

## ಮಲೆನಾಡು ಅಭಿವೃದ್ಧಿ

ಮಲೆನಾಡು ಅಭಿವೃದ್ಧಿಗಾಗಿ ಎರಡೂವರೆ ಕೋಟಿ ಮಂಜೂರು ಮಾಡಿ ಬೆಳಗಾವಿಯಲ್ಲಿ ಸೇರಿದ ಮಂತ್ರಿಮಂಡಲದ ಸಭೆ ಮಲೆನಾಡು ಅಭಿವೃದ್ಧಿಯ ಯೋಜನೆಯ ರೂಪರೇಷೆ ಏನೆಂಬ ಸಂಗತಿ ಸರಕಾರಕ್ಕೂ ಜನತೆಗೂ ತಿಳಿದೇ ಇಲ್ಲವಲ್ಲ?

ಮಲೆನಾಡಿನಲ್ಲಿ ಅಪಾರ ಸಂಪತ್ತು ಹುದುಗಿಕೊಂಡಿದೆ. ದಿ. ವಿಶ್ವೇಶ್ವರಯ್ಯನವರು ಭದ್ರಾವತಿಯಲ್ಲಿ ಸಿಮೆಂಟ್, ಉಕ್ಕು, ಕಾಗದ ಕಾರ್ಖಾನೆಗಳನ್ನು ಪ್ರಾರಂಭಿಸಿದಾಗಲೇ ಆ ವಿಷಯ ಗೊತ್ತು. ದಾಂಡೇಲಿ ಪೇಪರ್ ಮಿಲ್, ಹರಿಹರ ಪೊಲಿಫೈಬರ್ ಕಾರ್ಖಾನೆ, ಕುದುರೆಮುಖ ಯೋಜನೆಗಳು ಅದನ್ನು ಸಮರ್ಥಿಸಿವೆ. ನ್ಯೂಸ್ ಪ್ರಿಂಟ್, ಉಕ್ಕು, ಮುಂತಾದ ಅತ್ಯಾವಶ್ಯಕ ವಸ್ತುಗಳಿಗಾಗಿ ವಿದೇಶಗಳಿಗೆ ಕೈಯೊಡ್ಡಿ, ವಿದೇಶಿ ವಿನಿಮಯ ಹಣ ಅಪವ್ಯಯ ಮಾಡುವುದಕ್ಕಿಂತ, ಮಲೆನಾಡು ಪ್ರದೇಶದಲ್ಲಿ ಹುದುಗಿಕೊಂಡಿರುವ ಅಪಾರ ಸಂಪತ್ತನ್ನು ಕಂಡು ಹಿಡಿದು, ಹೊರತೆಗೆದು, ಉಪಯೋಗ ಮಾಡಬಾರದೆ? ಮಾಡಬೇಕು. ಅದು ಸಾಧ್ಯ! ಹೇಗೆ? ಅಧಿಕಾರಕ್ಕಾಗಿಯೇ ಕಚ್ಚಾಡುತ್ತಿರುವ, ದೂರದೃಷ್ಟಿಕೋಣವಿಲ್ಲದ ಇಂದಿರಾ ಪಕ್ಷದ ಸರಕಾರದಿಂದಲ್ಲ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಮುಖಂಡತ್ವದ ಎಡರಂಗ ಸರಕಾರದಿಂದ ಮಾತ್ರ. ಅದೂ ಕರ್ನಾಟಕ ರಾಜ್ಯದಲ್ಲಷ್ಟೇ ಅಂಥ ಸರಕಾರ ಅಧಿಕಾರಕ್ಕೆ ಬಂದರೆ ಸಾಲದು. ಕೇಂದ್ರದಲ್ಲೂ ಅಂಥ ಸರಕಾರಬೇಕು. ಯಾಕೆಂದರೆ, ಪ. ಬಂಗಾಲದ ಜ್ಯೋತಿಬಸು ಸರಕಾರ ಕೇಂದ್ರದ ಮಂಜೂರಿಗೆ ಕಳುಹಿಸಿಕೊಟ್ಟಿರುವ 32ಕ್ಕೂ ಹೆಚ್ಚಿನ ಮಸೂದೆಗಳು 3 ವರ್ಷಗಳಿಂದಲೂ ಇಂದಿರಾ ಮುಷ್ಟಿಯಲ್ಲೇ ಉಳಿದಿದೆ. ಉಕ್ಕು ಕಾರ್ಖಾನೆ, ಪೆಟ್ರೋಲಿಯಂ ಶುದ್ಧೀಕರಣ ಕೇಂದ್ರ, ರೈಲ್ವೆ ಅಭಿವೃದ್ಧಿಗಳಂಥ ಯೋಜನೆಗಳೂ ಇಂದಿರಾ ಗಾಂಧಿಯ ಎಂಟೀ ಬ್ಯಾಗಿನಲ್ಲೇ ಭದ್ರವಾಗುಳಿದಿವೆ. ನಮ್ಮ ರಾಜ್ಯದ ಯೋಜನೆಗಳು ಬೆಳಕು ಕಾಣಬೇಕಾದನೆ ರಾಜ್ಯದಲ್ಲೂ, ಕೇಂದ್ರದಲ್ಲೂ ಇಂದಿರಾ ಸರಕಾರ ಮುಳುಗಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮುಖಂಡತ್ವದಲ್ಲಿ ಎಡರಂಗ ಸರಕಾರ ಉದಯಿಸಬೇಕು. ರೈತ-ಕಾರ್ಮಿಕ ಯುವಜನತೆ ಈ ಮಹಾಕಾರ್ಯ ಮಾಡಬೇಕು. ಅದಕ್ಕಾಗಿ ಜನತೆ ಮುಂದೆ ಬರಬೇಕು. ಆ ಮಾರ್ಗದಲ್ಲಿ ಮುನ್ನಡೆಯೋಣವೇ?

ಗುತ್ತೇದಾರಿ ಬಂಡವಾಳಶಾಹಿ-ಭೂಮಾಲಕ ಪರ ಸರಕಾರ ಹೆಚ್ಚು ಲಾಭಗಿಟ್ಟಿಸುವುದಕ್ಕೆ ಅನುಕೂಲವಾದ ಕೈಗಾರಿಕೋದ್ಯಮ, ಅಭಿವೃದ್ಧಿ ಕೆಲಸಗಳಿಗಷ್ಟೇ ಪ್ರಾಶಸ್ತ್ಯ ನೀಡುತ್ತದೆ. ರಾಷ್ಟ್ರದ-ರಾಜ್ಯದ ಪೂರ್ಣ ಅಭಿವೃದ್ಧಿಯಾಗಿ, ಸಾರ್ವಜನಿಕರ ಸರ್ವತೋಮುಖ ವಿಕಾಸವಾಗಿ ಫಲ ಸಿಗಬೇಕಾದರೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮುಖಂಡತ್ವದ ಎಡರಂಗ ಸರಕಾರ ಅಸ್ತಿತ್ವದಲ್ಲಿ ಬರುವುದು ಅತ್ಯಗತ್ಯ. ಆ ಕಾರಣದಿಂದಲೇ ಈ ಕರೆ ಕೊಡುವುದು.

## ಗೇಣಿದಾರರ ಅರ್ಜಿ ನಾಪತ್ತೆ

"ಬಹುತೇಕವಾಗಿ ಗೇಣಿದಾರರ ಹಿತಕ್ಕೆ ಸಂಬಂಧಿಸಿದ ಅನೇಕ ಗೇಣಿ ಅರ್ಜಿಗಳು ನಾಶವಾಗಿವೆ" ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿ.

ನಾಪತ್ತೆಯಾಗಿರುವ ಅರ್ಜಿಗಳೆಲ್ಲ "ಸ್ವೀಕರಿಸಿ, ಪರಿಶೀಲಿಸಿ, ವಿಲೇವಾರಿ ಆಗಿರುವುವು".ಭೂಸುಧಾರಣೆಗೆ ಸಂಬಂಧಿಸಿದಂತೆ ನಾಪತ್ತೆಯಾಗಿರುವ ಅರ್ಜಿ ಮತ್ತು ಫೈಲುಗಳ ಬಗ್ಗೆ ಪರಿಶೀಲಿಸುವಂತೆ ಸರ್ಕಾರ ಕಳುಹಿಸಿದ್ದ ಸುತ್ತೋಲೆಗೆ ಉತ್ತರವಾಗಿ ಜಿಲ್ಲಾಧಿಕಾರಿಗಳು ಕಳುಹಿಸಿರುವ ವರದಿಗಳಲ್ಲಿ ಇದು ಸೇರಿದೆ.

(7ನೇ ಪುಟ ನೋಡಿ)

## "ಯುವಜನ ಕಾರ್ಯಕರ್ತರ ಸಭೆ"

ಸುಳ್ಯ ಪುರಸಭಾ ಹಳೆಗೇಟು ವಲಯದ ಡಿ.ವೈ.ಎಫ್.ಐ.ಯ ಕಾರ್ಯಕರ್ತರ ಸಭೆಯು ತಾಲ್ಲೂಕು ಅಧ್ಯಕ್ಷರಾದ ಪಿ. ಕೆ. ಮೂಸಾರವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಸುಳ್ಯದ ನ್ಯಾಯವಾದಿ ಸೂರ್ಯನಾರಾಯಣ ಭಟ್ ಮತ್ತು ಚೆನ್ನಪ್ಪನವರು ಮಾತನಾಡಿದರು. ತಾಲ್ಲೂಕು ಡಿ.ವೈ.ಎಫ್.ಐ. ಕಾರ್ಯದರ್ಶಿ ಜಯರಾಮರು ಉಪಸ್ಥಿತರಿದ್ದು ಮುಂದಿನ ಸಾಲಿನ ಹಳೆಗೇಟು ವಲಯದ ಅಧ್ಯಕ್ಷರಾಗಿ ಕೇಶವ, ಕಾರ್ಯದರ್ಶಿಯಾಗಿ ಓಸ್ವಾಲ್ಡ್, ಉಪಕಾರ್ಯದರ್ಶಿಯಾಗಿ ಕೆ. ವಿ. ರೋಬರ್ಟ್ಸ್‌ರವರನ್ನು ಒಳಗೊಂಡ 17 ಜನರ ಕಾರ್ಯಕಾರೀ ಸಮಿತಿಯನ್ನು ರಚಿಸಿ, ಜಯಂತಿಯವರ ಧನ್ಯವಾದದಿಂದ ಮುಕ್ತಾಯವಾಯಿತು.

o

# ಕರ್ನಾಟಕ ಪ್ರಾಂತ ರೈತಸಂಘದ ಕಾರ್ಯಕಾರಿ ಸಮಿತಿ ಸಭೆ

ಕರ್ನಾಟಕ ಪ್ರಾಂತ ರೈತಸಂಘದ ಕಾರ್ಯಕಾರಿ ಸಮಿತಿಯು ಬೆಂಗಳೂರಿನಲ್ಲಿ ಅಕ್ಟೋಬರ್ 9, 1981ರಂದು ಜರುಗಿತು. ಕೃಷಿ ರಂಗದಲ್ಲಿಯ ಪರಿಸ್ಥಿತಿಯನ್ನು, ಸಮಸ್ಯೆಗಳನ್ನು, ರೈತರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ರಾಜ್ಯ ಸರಕಾರ ಕೈಗೊಂಡ ಕ್ರಮಗಳನ್ನು ಕೂಲಂಕಷವಾಗಿ ಚರ್ಚಿಸಿ ಹಲವಾರು ಠರಾವುಗಳನ್ನು ಕೈಗೊಳ್ಳಲಾಗಿದೆ. ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ.

ಇತ್ತೀಚೆಗೆ ಕರ್ನಾಟಕದಲ್ಲಿ ರೈತರ ತೀವ್ರ ಹೋರಾಟ ನಡೆಯಿತು. ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆಗಳು, ಕೃಷಿ ಸಾಲ ಪರಿಹಾರ, ಭೂಸುಧಾರಣೆ ಮತ್ತು ಭೂಹೀನರಿಗೆ ಭೂಮಿ ಹಂಚಿಕೆ, ಕೃಷಿ ಕೂಲಿಗಾರರಿಗೆ ಜೀವನಾವಶ್ಯಕ ಕನಿಷ್ಠ ಕೂಲಿ, ಸರಕಾರದಿಂದಲೇ ಕೃಷಿ ಉತ್ಪನ್ನಗಳ ಸಗಟು ವ್ಯಾಪಾರ, ವ್ಯಾಪಕ ಪಡಿತರ ಪದ್ಧತಿ, ಬೆಲೆಏರಿಕೆ ತಡೆಗಟ್ಟುವಿಕೆ, ಕರಭಾರ ಪರಿಹಾರ, ಬರಗಾಲ ಪರಿಹಾರ, ಮುಂತಾದ ಸಮಸ್ಯೆಗಳನ್ನು ಮುಂದಿಟ್ಟು ರೈತರ ಹೋರಾಟ ನಡೆಯಿತು. ಪ್ರಾರಂಭದ ಮಲಪ್ರಭಾ ಹೋರಾಟದಿಂದ ಹಿಡಿದು ರೈತ ಕಾರ್ಮಿಕರ ವಿಧಾನಸೌಧ ಚಲೋ, ರೈತರ ಬೆಂಗಳೂರು ಜಾಥಾ ಕಾರ್ಯಕ್ರಮಗಳಲ್ಲಿ ಕರ್ನಾಟಕ ಪ್ರಾಂತ ರೈತಸಂಘ ಪ್ರಮುಖ ಪಾತ್ರ ವಹಿಸಿತ್ತು. ಎಚ್. ಎಸ್. ರುದ್ರಪ್ಪ ಅಂಥವರು ರಾಜ್ಯ ರೈತಸಂಘದ ಹೆಸರಿನಲ್ಲಿ ರಾಜ್ಯದಲ್ಲಿ ಸಂಯುಕ್ತ ರೈತಹೋರಾಟ ಬೆಳೆದುಬರುವುದಕ್ಕೆ ಅಡ್ಡಿತಂದರು. ಎಡ ಮತ್ತು ಪ್ರಜಾಪ್ರಭುತ್ವ ರಂಗದ ನೇತೃತ್ವದಲ್ಲಿ ರಚಿಸಿದ್ದ ರೈತಕಾರ್ಮಿಕರ ಹೋರಾಟ ಸಮಿತಿ, ಅದರ ನೇತೃತ್ವದಲ್ಲಿ ಹಾಕಿದ್ದ ರೈತರ ಜಾಥಾವು ರಾಜ್ಯದಲ್ಲಿ ಸುದೀರ್ಘ ರೈತರ ಹೋರಾಟಕ್ಕೆ ಆಶಾಕಿರಣ ನೀಡುವಷ್ಟರಲ್ಲೆ ಕಾಂಗ್ರೆಸ್ (ಯು) ನಾಯಕರ ಸಂದರ್ಭಸಾಧಕತನದಿಂದಾಗಿ ಏರ್ಪಟ್ಟ ಐಕ್ಯತೆಯಲ್ಲಿ ಮತ್ತೆ ಹಿಂದೇಟು ಬೀಳುವಂತಾಯಿತು. ಕರ್ನಾಟಕ ಪ್ರಾಂತ ರೈತಸಂಘವು ರೈತರ ಹೋರಾಟ ಸಂಯುಕ್ತವಾಗಿ ಸುದೀರ್ಘವಾಗಿ ಏರ್ಪಡುವಂತೆ ಆಸ್ತೆ ವಹಿಸಿ ಸಾಕಷ್ಟು ಶ್ರಮಿಸಿತು. ರಾಜ್ಯದಲ್ಲಿ ಚಾರಿತ್ರಿಕವಾದ ರೀತಿಯಲ್ಲೇ ರೈತಹೋರಾಟವು ನಡೆಯಿತು. ಇಂದಿರಾ ಕಾಂಗ್ರೆಸ್ ಸರಕಾರ ರೈತ ಹೋರಾಟಕ್ಕೆ ತತ್ತರಿಸಿತು. ರೈತ ಹೋರಾಟ ವಿಸ್ತರಿಸಿ ತೀವ್ರಗೊಳ್ಳಬಾರದೆಂದು ರೈತರಿಗೆ "ದಸರಾ ಕೊಡುಗೆ", "85 ಕೋಟಿ ರೂ. ಪರಿಹಾರ", "ಶ್ವೇತಪತ್ರ" ಮುಂತಾದ ಪ್ರಚಾರ ಕ್ರಮಗಳನ್ನು ಅತಿದೊಡ್ಡ ರೀತಿಯಲ್ಲಿ ಏರ್ಪಡಿಸಿ "ರೈತಬಂಧು" ಮುಖವಾಡ ಧರಿಸುವ ನಾಟಕ ನಡೆಸಿತು. ಆದರೆ ನಿಜಕ್ಕೂ ರೈತರ ಮೂಲಭೂತ ಸಮಸ್ಯೆಗಳನ್ನು ಕಾಂಗ್ರೆಸ್ ಸರಕಾರ ಬಗೆಹರಿಸಲಿಲ್ಲ. ರೈತರ ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ನೀಡುವಲ್ಲಿ, ಕೃಷಿಸಾಲ ಪರಿಹಾರ ನೀಡುವಲ್ಲಿ, ಬರಗಾಲಕ್ಕೆ ಶಾಶ್ವತ ಪರಿಹಾರ ಒದಗಿಸಿಕೊಡುವಲ್ಲಿ, ಕೃಷಿಕೂಲಿಗಾರರಿಗೆ ಜೀವನಾವಶ್ಯಕ ಕನಿಷ್ಠ ಕೂಲಿ ನಿಗದಿಪಡಿಸುವ ಪುನರ್ವಿಮರ್ಶೆ ನಡೆಸುವಲ್ಲಿ ಗುಂಡೂರಾವ್ ಸರಕಾರ ಸಂಪೂರ್ಣ ವಿಫಲಗೊಂಡಿದೆ. ಬದಲು ರೈತರ ಮೇಲೆ ಅಮಾನುಷವಾಗಿ ಗೋಲೀಬಾರು ನಡೆಸಿದೆ. ರೈತರ ಮೇಲಿನ ಕೇಸುಗಳನ್ನು ಹಿಂತೆಗೆದುಕೊಳ್ಳಲಿಲ್ಲ. ಹೀಗೆ ರೈತರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸಂಪೂರ್ಣ ವಿಫಲಗೊಂಡ ಗುಂಡೂರಾವ್ ಸರಕಾರವನ್ನು ಇನ್ನೂ ತೀವ್ರವಾಗಿ ವಿರೋಧಿಸಿ ಸುದೀರ್ಘ ಹೋರಾಟ ನಡೆಸಲು ರೈತರು ಸನ್ನದ್ಧರಾಗಲು ಕರ್ನಾಟಕ ಪ್ರಾಂತ ರೈತಸಂಘ ಕರೆ ಕೊಡುತ್ತದೆ.

ಈ ಸಂದರ್ಭದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂನ್ಯಾಯ ಮಂಡಲಿಗಳ ಭೂಮಾಲೀಕರ ಪರವಾದ ತೀರ್ಪುಗಳ ವಿರುದ್ಧ ಸರಕಾರವು ಕೂಡಲೇ ಈ ಎಲ್ಲಾ ತೀರ್ಮಾನಗಳನ್ನು ಪುನರ್ವಿಮರ್ಶಿಸುವಂತೆ ಕ್ರಮಗಳನ್ನು ಕೈಗೊಳ್ಳಲು ಸರಕಾರವನ್ನು ಒತ್ತಾಯಿಸುವ ಸಲುವಾಗಿ ತೀವ್ರ ಮತ್ತು ವ್ಯಾಪಕ ರೂಪದ ರೈತರ ಹೋರಾಟವನ್ನು ನಡೆಸಬೇಕೆಂತಲೂ;

ತೀರ್ಥಹಳ್ಳಿಯಲ್ಲಿ "ಕರ್ನಾಟಕ ರಾಜ್ಯದ ಭೂಸುಧಾರಣಾ ಕಾನೂನಿಗೆ ಸೂಕ್ತ ತಿದ್ದುಪಡಿಗಳನ್ನು ತಯಾರಿಸುವ ಸಲುವಾಗಿ ರಾಜ್ಯದ ರೈತರ ಸಮಾವೇಶ"ವನ್ನು ನಡೆಸಬೇಕೆಂತಲೂ;

ಅಕ್ಟೋಬರ್ 22ರಂದು ಗುಲ್ಬರ್ಗಾದಲ್ಲಿ ಬರಗಾಲಕ್ಕೆ ಶಾಶ್ವತ ಪರಿಹಾರ ಒತ್ತಾಯಿಸಿ "ಶಾಶ್ವತ ಬರಗಾಲ ಪರಿಹಾರ ಯೋಜನಾ ಕ್ರಿಯಾ ಸಮಿತಿ"ಯ ಆಶ್ರಯದಲ್ಲಿ ಮತ ಪ್ರದರ್ಶನ ನಡೆಸಿ ಗುಂಡೂರಾಯರಿಗೆ ಮನವಿ ಕೊಡಬೇಕೆಂದೂ ಸಭೆ ತೀರ್ಮಾನಿಸಿತು.

ಧಾರವಾಡದಲ್ಲಿ ಸೇರಿದಂತೆ ಕುಂದಾಪುರ, ಬೆಂಗಳೂರು ಮತ್ತು ರಾಯಚೂರುಗಳಲ್ಲಿ 4–5 ಜಿಲ್ಲೆಗಳ ಕೃಷಿ ಕೂಲಿಗಾರರ ಪ್ರತಿನಿಧಿಗಳ ಸಮಾವೇಶಗಳನ್ನು ಜರಗಿಸಿ ರಾಜ್ಯ ಸರಕಾರವು ರೂ. 10ಕ್ಕೆ ಕಡಿಮೆಯಾಗದಂತೆ ಕನಿಷ್ಠ ದಿನಕೂಲಿ ನಿರ್ಧರಿಸುವಂತೆ ಸರಕಾರಕ್ಕೆ ಒತ್ತಾಯಿಸಬೇಕೆಂದೂ;

ಫೆಬ್ರವರಿ 1982ರ ಒಳಗೆ ಎಲ್ಲಾ ಜಿಲ್ಲಾ ರೈತ ಸಮ್ಮೇಳನಗಳನ್ನು ನಡೆಸಿ ರಾಜ್ಯದ ರೈತ ಸಮ್ಮೇಳನವನ್ನು ಕೋಲಾರ ಜಿಲ್ಲೆಯ ಮುಳಬಾಗಿಲುನಲ್ಲಿ ಜರಗಿಸಬೇಕೆಂದೂ ಸಭೆ ತೀರ್ಮಾನ ಕೈಗೊಂಡಿತು.

●

## ಕರ್ನಾಟಕ ರಾಜ್ಯದಲ್ಲಿ

(6ನೇ ಪುಟದಿಂದ)

"ಅಗತ್ಯ ಬಿದ್ದಲ್ಲೆಲ್ಲ ವ್ಯಾಜ್ಯಗಳ ದಾಖಲೆಗಳನ್ನು ಮತ್ತೆ ಸೃಷ್ಟಿಸುವಂತೆ ಸೂಚಿಸಲಾಗಿದೆ.

ನವೆಂಬರ್ 1ರೊಳಗಾಗಿ ಭೂನ್ಯಾಯಕ್ಕೆ ಸಂಬಂಧಪಟ್ಟ ಎಲ್ಲ ಅರ್ಜಿಗಳನ್ನು "ನಿಕಾಲೆ" ಮಾಡಬೇಕೆಂದು ಗುಂಡೂರಾಯರ ಹುಕುಂ. ಈ ಆಜ್ಞೆಯನ್ನು ಅಕ್ಷರಶಃ ಪಾಲಿಸಬೇಕಾದರೆ ಪಾಪ! ಭೂಪಂಚಾಯಿತಿ ಅಧಿಕಾರಿಗಳೂ ಗುಮಾಸ್ತೆಯರೂ ಮತ್ತೇನು ಮಾಡಲಿಕ್ಕೆ ಸಾಧ್ಯವಿದೆ? ತಮ್ಮ ಬೇಡಿಕೆ ವಿರುದ್ಧವಾಗಬಹುದೆಂಬ ಸಂಶಯಿತ ಭೂಮಾಲಕರಾದರೂ ಏನು ಮಾಡಬೇಕು. ಇಬ್ಬರಿಗೂ ತೋಚುವ ದಾರಿ ಒಂದೇ? ಅದೇನು? ಅರ್ಜಿಗಳನ್ನೂ, ಫೈಲುಗಳನ್ನೂ ಕಚೇರಿಯಿಂದಾಚೆಗೆ ಕಳುಹಿಸಿದರಾಯಿತು. ಸರಕಾರಕ್ಕೆ ಜಿಲ್ಲಾಧಿಕಾರಿಗಳು ಅತ್ಯಂತ ಸಮರ್ಪಕವಾದಂಥ ಉತ್ತರ ಕೊಟ್ಟಿದ್ದಾರೆ. ಏನೆಂದರೆ "ನಾಪತ್ತೆಯಾಗಿರುವ ಅರ್ಜಿಗಳನ್ನೆಲ್ಲ ಸ್ವೀಕರಿಸಿ, ಪರಿಶೀಲಿಸಿ, ವಿಲೇವಾರಿ ಮಾಡಿದ್ದೇವೆ". ಹರಿಬ್ರಹ್ಮಾದಿಗಳಿಂದಲೂ ಇಂಥ ಕೆಲಸ ಸಾಧ್ಯವಿಲ್ಲ. ನಾಪತ್ತೆಯಾದ ಅರ್ಜಿಗಳನ್ನೆಲ್ಲ ವಿಲೇವಾರಿ ಮಾಡುವ ಕೆಲಸ. ಆದರೆ ಗುಂಡೂರಾವ್ ಸರಕಾರದ ಅಧಿಕಾರಿಗಳೂ, ಗುಂಡೂರಾವ್ ಕಾಂಗ್ರೆಸ್ ಪಕ್ಷದ ಭೂನ್ಯಾಯ ಮಂಡಲಿ ಸದಸ್ಯರೂ ದೇವಾದಿದೇವರಿಂದಾಗದ ಕೆಲಸ ಮಾಡಿ ತೋರಿಸಿದ್ದಾರಲ್ಲ? ಅರ್ಜಿಗಳನ್ನು ಕಣ್ಣಲ್ಲಿ ನೋಡದೆ, ಕೈಯಲ್ಲಿ ಹಿಡಿಯದೇ "ಸ್ವೀಕರಿಸಿ, ಪರಿಶೀಲಿಸಿ ವಿಲೇವಾರಿ" ಮಾಡಿದ್ದಾರೆಂದರೆ ಎಂಥ ಮಹಾಕಾರ್ಯ ನೀವೇ ನೋಡಿ! ದುಡಿಯುವ ಗೇಣಿದಾರರಿಗೆ ಭೂಮಿ ಒಡೆತನ ಕೊಡಿಸುವ ಮಹಾಪುಣ್ಯದ ಕೆಲಸ ಗುಂಡೂರಾವ್ ಸರಕಾರ ಯಾವ ರೀತಿ ಬಗೆಹರಿಸುತ್ತಿದೆ. ನವೆಂಬರ್ 1ರಂದು ಪತ್ತೆಯಾದ ಹಾಗೂ ನಾಪತ್ತೆಯಾದ ಅರ್ಜಿಗಳೆಲ್ಲ ಬರಖಾಸ್ತು ಆಗುತ್ತವೆ. ಅದೇ ದಿವಸ ಲಕ್ಷಾವಧಿ ರೈತರ ಉಪಜೀವನದ ದಾರಿಯೂ ಬರಖಾಸ್ತಾಗುತ್ತದೆ. ಮುಂದೇನು? ರೈತಸಂಘಕ್ಕೆ ಜಯವಾಗಲಿ, ಇನ್‌ಕಿಲಾಬ್ ಜಿಂದಾಬಾದ್ ಘೋಷಣೆ ಕೂಗುತ್ತ ಹೋರಾಟ ಮಾಡುವುದು. ಹೋರಾಟವೇ ನಮ್ಮ ದಾರಿ, ನಮ್ಮ ಗುರಿ.

●

## ಬಹಿರಂಗ ಸಭೆ

4–10–81 ರಂದು ಶಿವಮೊಗ್ಗೆಯಲ್ಲಿ ಪ್ರಗತಿಪರ ಜನತಂತ್ರರಂಗದ ನೇತೃತ್ವದಲ್ಲಿ ಕಾಂ. ಚಂದೂಕುಟ್ಟಿಯವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು.

ನ್ಯಾಯಬೆಲೆ ಅಂಗಡಿಯಲ್ಲಿ ಸರಬರಾಜು ಮಾಡುವ ಅಕ್ಕಿಯಬೆಲೆಯನ್ನು ಕೆ.ಜಿ ಒಂದಕ್ಕೆ ರೂ. 2.20 ಯಿಂದ ರೂ. 2.80 ಕ್ಕೆ ಹೆಚ್ಚಿಸಿರುವದನ್ನು ಸಭೆಯಲ್ಲಿ ಖಂಡಿಸಲಾಯಿತು. ಅಲ್ಲದೇ ಗೋಧಿ, ಸಕ್ಕರೆ, ಮೈದಾ, ಎಣ್ಣೆ ಇತ್ಯಾದಿ ನಿತ್ಯೋಪಯೋಗಿ ವಸ್ತುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಪೂರೈಸಬೇಕೆಂದು ಒತ್ತಾಯಿಸಲಾಯಿತು.

ಸೌದೆಬೆಲೆಯನ್ನು ದಿಢೀರ್‌ಆಗಿ ಟನ್‌ಒಂದಕ್ಕೆ 100 ರೂ.ನಿಂದ ರೂ. 206ಕ್ಕೆ ಏರಿಸಿರುವುದನ್ನು ಸಭೆಯಲ್ಲಿ ಉಗ್ರವಾಗಿ ಖಂಡಿಸಲಾಯಿತು.

ಸಭೆಯನ್ನು ಉದ್ದೇಶಿಸಿ ಲೋಕದಳದ ಶ್ರೀ ಪುಟ್ಟಯ್ಯ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್‌ಪಕ್ಷದ ಕಾಂ. ಶಿವಶಂಕರ್, ಕಾಂಗ್ರೆಸ್(ಎಸ್) ನ ಶ್ರೀ ಕರಿಯಪ್ಪ, ಶ್ರೀನಿವಾಸ ಮತ್ತು ರಾಜು, ಜನತಾದ ಶ್ರೀ ಉಮಾಶಂಕರ್, ಅಂಚೆ-ತಂತಿ ನೌಕರರ ಸಂಘದ ಕಾಂ. ಸೋಲೋಮನ್ ಮತ್ತು ಮಂಜುನಾಥ, ಎಲ್ಲೈಸಿಯ ಕಾಂ. ಲಕ್ಷ್ಮೀನಾರಾಯಣ, ಹಮಾಲಿ ಕಾರ್ಮಿಕರ ಸಂಘದ ಶ್ರೀ ಕರೀಂಖಾನ್ ಮೊದಲಾದವರು ಸಭೆಯನ್ನುದ್ದೇಶಿಸಿ ಮಾತನಾಡಿ ನಗರಸಭೆಯ ಅಸಮರ್ಪಕ ಆಡಳಿತವನ್ನು ಖಂಡಿಸಿದರು.

●

## ಡಿ. ವೈ. ಎಫ್. ಐ. ನ ಬೆಂಗಳೂರು ಜಿಲ್ಲಾ ಸಮ್ಮೇಳನ

ದಿನಾಂಕ 9-10-81ರಂದು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್‌ನ ಬೆಂಗಳೂರು ಜಿಲ್ಲಾ ಪ್ರಥಮ ಸಮ್ಮೇಳನವು ಬೆಂಗಳೂರಿನಲ್ಲಿ ನಡೆಯಿತು.

ಸಮ್ಮೇಳನವನ್ನು ಡಿ.ವೈ.ಎಫ್.ಐ.ನ ರಾಜ್ಯ ಸಂಚಾಲಕ ಕಾಂ. ಜಿ.ವಿ. ಶ್ರೀರಾಮರೆಡ್ಡಿಯವರು ಉದ್ಘಾಟಿಸಿದರು.

ಆರಂಭದಲ್ಲಿ ಎಸ್. ಎಫ್. ಐ., ರೈತಸಂಘ, ಕೆಲವು ಕಾರ್ಮಿಕ ಸಂಘಗಳ ಪ್ರತಿನಿಧಿಗಳು ಸಮ್ಮೇಳನಕ್ಕೆ ಆಗಮಿಸಿ ಶುಭಾಶಯ ಕೋರಿದರು.

ನಂತರ ಜಿಲ್ಲಾ ಸಂಚಾಲಕ ಕಾಂ. ಎಸ್. ಶಿವರಾಂ ಅವರು ವರದಿ ಮಂಡಿಸಿದರು. ವರದಿ ಮೇಲೆ ನಡೆದ ಚರ್ಚೆಯಲ್ಲಿ 10ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಚರ್ಚೆಯ ನಂತರ ವರದಿಯನ್ನು ಅಂಗೀಕರಿಸಲಾಯಿತು.

ವಿದ್ಯಾರ್ಥಿ ಮತ್ತು ಯುವಜನರ ಪ್ರಜಾಪ್ರಭುತ್ವ ಹಕ್ಕುಗಳನ್ನು ಕಿತ್ತುಕೊಳ್ಳುವ ಮತ್ತು ಅವರ ಮೇಲೆ ನಡೆಯುತ್ತಿರುವ ಹಲ್ಲೆಯನ್ನು ಸಮ್ಮೇಳನದಲ್ಲಿ ಖಂಡಿಸಲಾಯಿತು.

ಅನಕ್ಷರಸ್ಥ ಯುವಜನರಿಗೆ ರಾತ್ರಿ ಶಾಲೆಗಳನ್ನು ನಡೆಸುವಂತೆ, ಸ್ಟೈಫಂಡರೀ ಪದವೀಧರರ ಕೆಲಸವನ್ನು ಖಾಯಂಗೊಳಿಸಬೇಕು ಹಾಗೂ ನಿರುದ್ಯೋಗಿಗಳಿಗೆ ಉದ್ಯೋಗ ಭತ್ಯೆ ಕೊಡಬೇಕು, ಪಡಿತರ ಚೀಟಿ (ರೇಷನ್ ಕಾರ್ಡ್) ಹೊಂದಿರುವವರಿಗೆ ಸಾಕಷ್ಟು ಪ್ರಮಾಣದಲ್ಲಿ ಆಹಾರಧಾನ್ಯ ಸರಬರಾಜು ಮಾಡಬೇಕು ಹಾಗೂ ಬೆಂಗಳೂರಿನ ಎಲ್ಲ ನಿವಾಸಿಗಳಿಗೆ ಯಾವುದೇ ನಿಬಂಧನೆ ಇಲ್ಲದೇ ಪಡಿತರ ಚೀಟಿ ಹಂಚಬೇಕು ಈ ಮುಂತಾದ ಸರಕಾರವನ್ನು ಒತ್ತಾಯಿಸುವ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಕೊನೆಯಲ್ಲಿ ಬೆಂಗಳೂರು ಜಿಲ್ಲಾ ಸಮಿತಿಗೆ ಈ ಕೆಳಕಂಡವರನ್ನು ಪದಾಧಿಕಾರಿಗಳಾಗಿ ಚುನಾಯಿಸಲಾಯಿತು.

ಕಾಂ. ಜಯಶೇಖರ (ಅಧ್ಯಕ್ಷ), ಕಾಂ. ಶಿವರಾಂ (ಪ್ರಧಾನಕಾರ್ಯದರ್ಶಿ), ಚಂದ್ರು ಮತ್ತು ಕೃಷ್ಣಮೂರ್ತಿ (ಉಪಾಧ್ಯಕ್ಷರುಗಳು), ಎಸ್. ಸುಬ್ಬೇಗೌಡ ಮತ್ತು ರಂಗಸ್ವಾಮಿ (ಸಹ ಕಾರ್ಯದರ್ಶಿಗಳು) ಮತ್ತು ಖಜಾಂಚಿಯಾಗಿ ಕಾಂ. ಕುಮಾರ.

ಇದರೊಟ್ಟಿಗೆ 12 ಜನರ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು.

ಎಸ್. ಎಫ್. ಐ.ನ ಸಂಗಾತಿಗಳು "ಭಾರತ ದರ್ಶನ" ಎಂಬ ನಾಟಕವನ್ನು ಪ್ರದರ್ಶಿಸಿದರು. ●

## ಮತ ಪ್ರದರ್ಶನ

ಚಿಕ್ಕಬಳ್ಳಾಪುರದಲ್ಲಿ ನೀರಿನ ತೆರಿಗೆಯನ್ನು ಹೆಚ್ಚಿಸಿರುವುದನ್ನು ಪ್ರತಿಭಟಿಸಿ 3-10-81 ರಂದು ನಗರವಾಸಿಗಳು ಬೃಹತ್ ಮತಪ್ರದರ್ಶನ ಮಾಡಿದರು. ಮತಪ್ರದರ್ಶನದ ನೇತೃತ್ವವನ್ನು ಕಾಂ. ಎಸ್. ಲಕ್ಷ್ಮಮ್ಮ ವಹಿಸಿದ್ದರು. ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದ ಪ್ರದರ್ಶನಕಾರರು ತೆರಿಗೆ ಇಳಿಸುವಂತೆ ಒತ್ತಾಯಿಸಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಸಂಜೆ 4 ಘಂಟೆಗೆ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಕಾಂ. ಲಕ್ಷ್ಮಯ್ಯ, ವಿ. ಸಿ. ತಿಮ್ಮರಾಯಪ್ಪ ಮಾತನಾಡಿ ನೀರಿನತೆರಿಗೆ ಇಳಿಸುವವರೆಗೆ ಹೋರಾಡಲು ಕರೆ ನೀಡಿದರು.

ಕೊನೆಯಲ್ಲಿ ಕಾಂ. ಸತ್ಯನಾರಾಯಣ ವಂದಿಸಿದರು. ○

# ದಾಂಡೇಲಿಯಲ್ಲಿ ಗೋಲಿಬಾರ್, ಲಾಠೀಚಾರ್ಜ್

(1ನೇ ಪುಟದಿಂದ)

ಕಾರ್ಮಿಕರು ಮಾತ್ರ ಈ ಹಣವನ್ನು ಸ್ವೀಕರಿಸಿದರು. ಈ ಇಬ್ಬರು ಚಮಚಾಗಳನ್ನು ಉಳಿದು ಎಲ್ಲ ಕಾರ್ಮಿಕರೂ ಸೇರಿ ಛೀಮಾರಿ ಹಾಕಿದರು. ತತ್‌ಕ್ಷಣ ಪ್ಲೈವುಡ್ ಆಡಳಿತ ವರ್ಗ ಪೋಲೀಸರಿಗೆ ದೂರು ಕೊಟ್ಟರು. ಅಲ್ಲದೇ ಯೂನಿಯನ್ನಿನ ಇಬ್ಬರು ಸಕ್ರಿಯ ಕಾರ್ಯಕರ್ತರನ್ನು ಕೆಲಸದಿಂದ ವಜಾಮಾಡಿದರು. ಮ್ಯಾನೇಜ್‌ಮೆಂಟಿನ ಭಿನ್ನಹದ ಮೇರೆಗೆ ಪೋಲೀಸರು ಕಾರ್ಮಿಕರ ಕಾಲೋನಿಗೆ ನುಗ್ಗಿ ಕೈಗೆ ಸಿಕ್ಕವರನ್ನು ಥಳಿಸಿದರು. ತಾವು ಪೋಲೀಸ್ ಕೆಲಸಕ್ಕೆ ಸೇರಿದ್ದನ್ನು ಸಾರ್ಥಕಪಡಿಸಿಕೊಂಡರು.

ಪುನಃ 16ರಂದು ವಜಾಮಾಡಲಾಗಿದ್ದ ಇಬ್ಬರು ಕಾರ್ಮಿಕರನ್ನು ವಾಪಸ್ ತೆಗೆದುಕೊಳ್ಳುವಂತೆ ಒತ್ತಾಯಿಸಿ ಐ. ಪಿ. ಎಂ. ಕಾರ್ಮಿಕರು ಟೂಲ್ಸ್ ಡೌನ್ ಮುಷ್ಕರ ಹೂಡಿದರು. ಮತ್ತೆ ಪೋಲೀಸರ ಮಧ್ಯ ಪ್ರವೇಶ, ಲಾಠೀ ಹೊಡೆತ ಎಲ್ಲಾ ಯೋಜಿತ ರೀತಿಯಲ್ಲೇ.

## ಬೆಂಬಲ

ಹೋರಾಟಕ್ಕಿಳಿದ ಐ. ಪಿ. ಎಂ. ಕಾರ್ಮಿಕರನ್ನು ಬೆಂಬಲಿಸಿ ದಾಂಡೇಲಿ ಪೇಪರ್ ಮಿಲ್ಲಿನ, ಫೆರ್ರೋ ಅಲಾಯ್ಸ್‌ನ ಕಾರ್ಮಿಕ ಸಂಗಾತಿಗಳೂ ಮೆರವಣಿಗೆ, ಮತಪ್ರದರ್ಶನ ಮಾಡಿದರು. ಬಹಿರಂಗ ಸಭೆಯೂ ನಡೆಯಿತು. ಧಾರವಾಡದ ಪ್ಲೈವುಡ್ ಕಾರ್ಮಿಕರೂ ಬಹಿರಂಗ ಸಭೆ ನಡೆಸಿ ತಮ್ಮ ಬೆಂಬಲ ಸೂಚಿಸಿದರು.

## ದಮನಕಾಂಡ

“ದಾಂಡೇಲಿ ಉದ್ರಿಕ್ತವಾಗಿದೆ”, ‘ಅಶಾಂತಿ ಹರಡಿದೆ’ ಎಂದು ಕೂಗೆಬ್ಬಿಸಿ ನಗರದಲ್ಲಿ ಪ್ರತಿಬಂಧಕಾಜ್ಞೆ (144 ಐ. ಪಿ. ಸಿ.) ಯನ್ನು ಜಾರಿಗೊಳಿಸಲಾಯಿತು. ಇದು ಪ್ರಥಮ ಹೆಜ್ಜೆ. ನಂತರ ಸುವ್ಯವಸ್ಥಿತವಾಗಿ ಬೇಟೆ ನಡೆಯಿತು. ಬೆಳಗಾಂವಿ ಮುತ್ತಿತರ ಕಡೆಗಳಿಂದ ಸಶಸ್ತ್ರ ಪೋಲೀಸರು ಬಂದಿಳಿದರು. ಕಾರ್ಖಾನೆಗಳಲ್ಲಿ ಒಳಹೊಕ್ಕು ಕಾರ್ಮಿಕರಿಗೆ ಹೊಡೆತ ಬಡೆತ ಪ್ರಾರಂಭವಾಯಿತು.

ಪೋಲೀಸರ ರಾಕ್ಷಸೀಕೃತ್ಯದ ಒಂದು ಉದಾಹರಣೆಯೆಂದರೆ ಪೀಟರ್ ಎಂಬ ಕಾರ್ಮಿಕನೋರ್ವನ ಮನೆಗೆ ನುಗ್ಗಿ ಅವನನ್ನು ಥಳಿಸಿದ್ದಾರೆ. ಅವನು ತೀವ್ರ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಗರ್ಭಿಣಿಯಾಗಿದ್ದ ಅವನ ಹೆಂಡತಿಗೆ ವಿಪರೀತ ಹೊಡೆದದ್ದರಿಂದ ಅವಳಿಗೆ ಗರ್ಭಸ್ರಾವ ಆಗಿದೆ. ಇದು ಪೋಲೀಸರ ಕ್ರೌರ್ಯಕ್ಕೆ ದೃಷ್ಟಾಂತ.

29-9-81ರಂದು ಕಾರವಾರ ಪಕ್ಕದ ಬಿಣಗಾದಲ್ಲಿ ಕಾಸ್ಟಿಕ್‌ಸೋಡಾ ಕಾರ್ಖಾನೆಯ ಕಾರ್ಮಿಕರು, ಸಾರ್ವಜನಿಕರು ದಾಂಡೇಲಿಯಲ್ಲಿನ ಪೋಲೀಸ್ ದೌರ್ಜನ್ಯವನ್ನು ಖಂಡಿಸಿ ಪ್ರತಿಭಟನಾ ಸಭೆ ನಡೆಸಿದರು. ಸಭೆಯನ್ನುದ್ದೇಶಿಸಿ ಕಾಂ. ಆರ್. ಜಿ. ಸ್ಥಳೇಕರ ಮತ್ತು ಕಾಂ. ಎಂ. ಎಸ್. ಧಾರೇಶ್ವರ ಮಾತನಾಡಿ ಪೋಲೀಸರು ನಡೆಸಿರುವ ಅತ್ಯಾಚಾರಕುರಿತು ನ್ಯಾಯಾಂಗ ವಿಚಾರಣೆ ನಡೆಸಬೇಕೆಂದು ಒತ್ತಾಯಿಸಿದರು.

## ಗೋಲೀಬಾರ್, ಲಾಠೀಚಾರ್ಜು

11-10-81 ಭಾನುವಾರ ಮೂವರು ಕಾರ್ಮಿಕರನ್ನು ಬಂಧಿಸಿ ಠಾಣೆಯಲ್ಲಿ ಚಿತ್ರಹಿಂಸೆ ಮಾಡಿದರು. 12-10-81ರ ಬೆಳಿಗ್ಗೆ ಈ ಬಂಧನವನ್ನು ಪ್ರತಿಭಟಿಸಿ ಸಾವಿರಾರು ಜನ ಕಾರ್ಮಿಕರು ಪೋಲೀಸ್ ಠಾಣೆಯ ಎದುರು ಮತಪ್ರದರ್ಶನ ಮಾಡಿದರು. ತಮ್ಮ ಸಂಗಾತಿಗಳಿಗಾದ ಅನ್ಯಾಯ ಪ್ರತಿಭಟಿಸುವುದು ಕಾರ್ಮಿಕರ ಕರ್ತವ್ಯವಾಗಿತ್ತು. ಈ ಪ್ರತಿಭಟನೆಯಿಂದ ರೊಚ್ಚಿಗೆದ್ದ ಪೋಲೀಸರು ಲಾಠೀ ಪ್ರಹಾರ, ಅಶ್ರುವಾಯು ಪ್ರಯೋಗ, ಗೋಲೀಬಾರ್ ಹೀಗೆ ತಮ್ಮ ಬತ್ತಳಿಕೆಯ ಎಲ್ಲ ಬಾಣಗಳನ್ನೂ ಕಾರ್ಮಿಕರ ಮೇಲೆ ಪ್ರಯೋಗಿಸಿದರು. ಅನೇಕರು ತೀವ್ರ ಗಾಯಗೊಂಡರು, ಕೆಲವರ ಬಂಧನವಾಯಿತು. ಈ ಕುರಿತು ಬಂಧಿಸಿದವರಲ್ಲಿ ಕಾಂ. ಸ್ಥಳೇಕರರೂ ಸೇರಿದ್ದರು.

ಮತ್ತೆ 13-10-81ರಂದು ಕಾಗದ ಕಾರ್ಖಾನೆಯ ಆವರಣದಲ್ಲಿ ಲಾಠೀ ಚಾರ್ಜ್ ಮಾಡಲಾಯಿತು. ಬಂಧನ ಸತ್ರ ಆರಂಭವಾಯಿತು. ಪ್ರಭುತ್ವದ ರಕ್ಷಕರು ಮಾನವೀಯ ಮೌಲ್ಯ, ಘನತೆಗಳನ್ನು ಗಾಳಿಗೆ ತೂರಿ ಅತ್ಯಾಚಾರ ಪ್ರಾರಂಭಿಸಿದ್ದಾರೆ. ಕಾರ್ಮಿಕರ ಕಾಲೋನಿಗೆ ತೆರಳಿ ಹೆಂಗಸರು ಮಕ್ಕಳೆನ್ನದೇ ಎದುರು ಕಂಡವರನ್ನು ಥಳಿಸಿದ್ದಾರೆ. ಅನೇಕ ಹೆಂಗಳೆಯರು ಈ ರಾವಣನ ಪೀಳಿಗೆಯವರ ಕ್ರೌರ್ಯಕ್ಕೆ ಭೀತರಾಗಿ ಅಡವಿ ಸೇರಿದ್ದಾರೆ.

ಒಟ್ಟು ನೂರಕ್ಕೂ ಹೆಚ್ಚು ಜನರನ್ನು ಬಂಧಿಸಲಾಗಿದೆ. ಬಂಧಿತರನ್ನು ಚಿತ್ರಹಿಂಸೆಗೆ ಗುರಿಮಾಡಿದ್ದಾರೆ. ಅವರನ್ನು ನ್ಯಾಯಾಂಗ ಕಸ್ಟಡಿಗೆ ತಳ್ಳಿದ್ದಾರೆ.

ರಾಜ್ಯದ ಸಮಸ್ತ ಕಾರ್ಮಿಕ ವರ್ಗ ದಾಂಡೇಲಿಯಲ್ಲಿ ಪೋಲೀಸ್ ಪಡೆ ನಡೆಸಿರುವ ಕಿರಾತ ನೃತ್ಯವನ್ನು ಪ್ರತಿಭಟಿಸಬೇಕು. ದುಡಿಯುವ ವರ್ಗವನ್ನು ಲಾಠೀ ಗುಂಡುಗಳಿಂದ ಹತ್ತಿಕ್ಕಲಾಗದು ಎಂದು ತೋರಿಸಿಕೊಡಬೇಕು. ದಾಂಡೇಲಿಯಲ್ಲಿ ದಮನ ಕಾರ್ಯ ಕೂಡಲೇ ನಿಲ್ಲಿಸದಿದ್ದರೆ ರಾಜ್ಯದಾದ್ಯಂತ ಕಾರ್ಮಿಕ ವರ್ಗ ಸಿಡಿದೇಳಬೇಕು. ಕಿವುಡರಿಗೆ ಕೇಳಿಸಬೇಕಾದರೆ ಜೋರಾಗಿ ಕೂಗಬೇಕು.

## ಪ್ರತಿಭಟನೆ

ದಾಂಡೇಲಿಯಲ್ಲಿನ ಪೋಲೀಸ್ ದೌರ್ಜನ್ಯವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಘಟಕದ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್, ಸೆಕ್ರೆಟಾರಿಯೇಟ್ ಸದಸ್ಯ ಕಾಂ. ಎನ್. ಎಲ್. ಉಪಾಧ್ಯಾಯ, ಸಿ. ಐ. ಟಿ. ಯು. ಅಧ್ಯಕ್ಷ ಕಾಂ. ಎಸ್. ಸೂರ್ಯನಾರಾಯಣರಾವ್, ಪ್ರಧಾನಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪ ಉಗ್ರವಾಗಿ ಖಂಡಿಸಿದ್ದಾರೆ. ಈ ಕುರಿತು ನ್ಯಾಯಾಂಗ ತನಿಖೆಯಾಗಬೇಕೆಂದು ಒತ್ತಾಯಿಸಿದ್ದಾರೆ. ಬಂಧಿತರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಎಚ್ಚರಿಸಿದ್ದಾರೆ.

ದಬ್ಬಾಳಿಕೆಯಿಂದ ಕಾರ್ಮಿಕರ ಹುಟ್ಟಡಗಿಸುವೆವೆಂದು ಚಂದೂಲಾಲ್, ಪಾವಟೆ ತಿಳಿದುಕೊಂಡಿದ್ದರೆ ಅವರು ಮೂರ್ಖರಷ್ಟೇ. ಈ ದೌರ್ಜನ್ಯಕ್ಕೆ ಜನತೆ ಖಂಡಿತ ಪಾಠ ಕಲಿಸುತ್ತದೆ. ಇದು ನಿಸ್ಸಂಶಯ.

ಪೋಲೀಸ್ ದೌರ್ಜನ್ಯಕ್ಕೆ ಧಿಕ್ಕಾರ, ಕಾರ್ಮಿಕ ದ್ರೋಹಿ ಸರಕಾರಕ್ಕೆ ಧಿಕ್ಕಾರ, ಧಿಕ್ಕಾರ, ಧಿಕ್ಕಾರ. ○

## ಎಸ್.ಎಫ್.ಐ. ವಿಜಯ

ದಿನಾಂಕ 30-9-81ರಂದು ರಾಯಚೂರು ಜಿಲ್ಲೆಯ ಸಿಂಧನೂರಿನ ಸರಕಾರಿ ಕಾಲೇಜಿನಲ್ಲಿ ವಿದ್ಯಾರ್ಥಿಸಂಘದ ಚುನಾವಣೆಯಲ್ಲಿ ಎಸ್.ಎಫ್.ಐ. ಸದಸ್ಯರು ಆಯ್ಕೆಯಾಗಿದ್ದಾರೆ. ಎಸ್.ಎಫ್.ಐ. ಅಭ್ಯರ್ಥಿಗಳು ಚಲಾವಣೆಯಾದ ಒಟ್ಟು ಮತಗಳ ಶೇ. 70 ರಿಂದ ಶೇ. 75 ಮತಗಳನ್ನು ಪಡೆದಿದ್ದಾರೆ.

ವಿದ್ಯಾರ್ಥಿ ಸಂಘದ ಉಪಾಧ್ಯಕ್ಷರಾಗಿ ಕಾಂ. ದೊಡ್ಡಯ್ಯ, ಪ್ರಧಾನ ಕಾರ್ಯದರ್ಶಿ ಕಾಂ. ಬಿ. ಲಿಂಗಪ್ಪ, ವಿದ್ಯಾರ್ಥಿನಿ ಪ್ರತಿನಿಧಿ ಕಾಂ. ಲತಾ ಆಚಾರ್ಯ ಮತ್ತು ಸಹಕಾರ್ಯದರ್ಶಿಯಾಗಿ ಕಾಂ. ಮಂಜುಳಾದೇವಿ ಇವರು ಚುನಾಯಿತರಾದ ಎಸ್. ಎಫ್. ಐ.ನ ಅಭ್ಯರ್ಥಿಗಳು.

13 ಪ್ರತಿನಿಧಿಗಳಲ್ಲಿ 10ಜನ ಎಸ್. ಎಫ್. ಐ. ಸದಸ್ಯರು ಚುನಾಯಿತರಾಗಿದ್ದಾರೆ. ಈ ವಿಜಯ ಎಸ್. ಎಫ್. ಐ.ನ ಗಮನಾರ್ಹ ಸಾಧನೆಯಾಗಿದೆ. ○

**ಕೇರಳ ಎಡ ಮತ್ತು ಪ್ರಜಾಪ್ರಭುತ್ವ ಸರಕಾರದಲ್ಲಿ ಪಾಲುದಾರರಾಗಿದ್ದ ಕಾಂಗ್ರೆಸ್ (ಎಸ್) ತನ್ನ ಬೆಂಬಲವನ್ನು ವಾಪಸ್ಸು ತೆಗೆದುಕೊಳ್ಳಲಿರುವ ವರದಿ (ಪತ್ರಿಕೆ ಅಚ್ಚಾಗುವ ವೇಳೆಯಲ್ಲಿ) ಬಂದಿದೆ.**

## ಸಂಪಾದಕೀಯ

(ಒಂದನೇ ಪುಟದಿಂದ)

ನಲ್ಲಿ ಮುಖ್ಯಮಂತ್ರಿ ದರ್ಬಾರಸಿಂಗ್ ಮತ್ತು ಕೇಂದ್ರ ಗೃಹ ಮಂತ್ರಿ ಜೈಲ್‌ಸಿಂಗ್ ಬೆಂಬಲಿಗರೊಳಗಿರುವ ತಿಕ್ಕಾಟ, ಗುಜರಾತಿನಲ್ಲಿ ಮುಖ್ಯಮಂತ್ರಿ ಸೋಲಾಂಕಿ ಮತ್ತು ಕೇಂದ್ರ ಗೃಹ ಸಚಿವ ಯೋಗೇಂದ್ರ ಮಕ್ವಾನಾ ಅವರ ಬೆಂಬಲಿಗರೊಳಗಿರುವ ಜಗಳ...ಹೀಗೆಯೇ ಪ್ರತಿಯೊಂದು ರಾಜ್ಯದಲ್ಲೂ ಒಳಜಗಳ, ಗುಂಪು ಕಾಳಗ ದಿನನಿತ್ಯದ ಸುದ್ದಿಯಾಗಿದೆ. ಬಹುಸಂಖ್ಯಾತ ಶಾಸಕರ ಬೆಂಬಲವಿದ್ದಾಗ್ಯೂ ಕಾಂಗ್ರೈ ಆಡಳಿತ ನಡೆಸುತ್ತಿರುವ ರಾಜ್ಯಗಳಲ್ಲಿ ಮಂತ್ರಿಮಂಡಲದ ಬದಲಾವಣೆ, ಅಸ್ಥಿರತೆ, ರಾಜಕೀಯ ಗೊಂದಲ, ಅದಕ್ಷ ಆಡಳಿತ ಕಂಡುಬರುತ್ತಿದೆ. ಅಧಿಕಾರದ ಆಸೆಗಾಗಿ ಎಲ್ಲಾ ರಾಜಕೀಯ ಮತ್ತು ನೈತಿಕ ಮೌಲ್ಯಗಳನ್ನು ಬದಿಗೊತ್ತಿ ಇಂದಿರಾಗಾಂಧಿಯ ಹಿಂದೆ ಓಡುವ ಜನರಿಂದ ತುಂಬಿದ ಕಾಂಗ್ರೈಯಲ್ಲಿ ಬೆಳೆದಿರುವ ಯಾದವೀ ಕಲಹವನ್ನು ರಾಠೋಡ್ ಅವರಿಂದ ನಿಲ್ಲಿಸುವುದು ಸಾಧ್ಯವಿಲ್ಲ. ಆಂಧ್ರದಲ್ಲಾದಂತೆ ಅವರೂ ಷೋಕಾಸ್ ನೋಟೀಸನ್ನು ವಾಪಸ್ಸು ತೆಗೆದುಕೊಳ್ಳುವಂತಾದರೆ ಆಶ್ಚರ್ಯಪಡಬೇಕಿಲ್ಲ.

●

## ಪ್ರತಿಭಟನಾ ಪ್ರದರ್ಶನ

ಗುಡಿಸಲು ವಾಸಿಗಳೇ ಹೆಚ್ಚಾಗಿರುವ ಹರಿಹರ ನಗರದ ಬೆಂಕಿನಗರ ಪ್ರದೇಶದ ವಾಸಿಗಳು ನೀರು, ಬೆಳಕು, ಸ್ವಚ್ಛತೆಯನ್ನು ಒದಗಿಸುವಲ್ಲಿ ಪುರಸಭೆಯವರು ತಮ್ಮನ್ನು ಕಡೆಗಣಿಸುತ್ತಿರುವುದನ್ನು ತಾ. 13-10-81ರಂದು ಪ್ರತಿಭಟಿಸಿದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸ್ಥಳೀಯ ಘಟಕ ವ್ಯವಸ್ಥೆ ಮಾಡಿದ್ದ ಪ್ರತಿಭಟನಾ ಪ್ರದರ್ಶನದಲ್ಲಿ ಕೆಂಬಾವುಟಗಳನ್ನು ಹಿಡಿದು ಐನೂರಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ಮಹಿಳೆಯರೇ ಅಧಿಕ ಸಂಖ್ಯೆಯಲ್ಲಿದ್ದ ಮೆರವಣಿಗೆ ತಹಸೀಲ್ದಾರರ ಕಚೇರಿಯನ್ನು ಪ್ರವೇಶಿಸಿ ಆಡಳಿತಾಧಿಕಾರಿಯೂ ಆಗಿರುವ ತಹಸೀಲ್ದಾರರು ಖುದ್ದು ಬಂದು ಸಮಜಾಯಿಸಿ ಕೊಡುವವರೆಗೆ ಹೋಗುವುದಿಲ್ಲವೆಂದು ಅವರ ಕೊಠಡಿಯ ಎದುರೇ ಕುಳಿತುಕೊಂಡರು.

ಭೂನ್ಯಾಯ ಮಂಡಳಿಯ ಸಭೆಯಲ್ಲಿ ಭಾಗವಹಿಸಲು ಬಂದಿದ್ದ ವಿಶೇಷ ಜಿಲ್ಲಾಧಿಕಾರಿಗಳು, ಉಪ-ವಿಭಾಗಾಧಿಕಾರಿಗಳು ಸಮಸ್ಯೆಗಳತ್ತ ಗಮನಹರಿಸಲು ತಾವು ತಹಸೀಲ್ದಾರರಿಗೆ ಸೂಕ್ತ ಮಾರ್ಗದರ್ಶನ ನೀಡುವುದಾಗಿ ಭರವಸೆಯಿತ್ತರು. ಅಹವಾಲನ್ನು ಸ್ವೀಕರಿಸಿದ ತಹಸೀಲ್ದಾರರು ಕೂಡಲೇ ಕ್ರಮ ಕೈಗೊಳ್ಳುವುದಾಗಿ ತಾವೇ ಬಂದು ಜನಗಳಿಗೆ ಭರವಸೆ ನೀಡಿದರಲ್ಲದೆ, ತಕ್ಷಣ ಪುರಸಭೆ ಅಧಿಕಾರಿಗಳನ್ನು ಪರಿಶೀಲನೆಗಾಗಿ ಕಳುಹಿಸಿಕೊಟ್ಟರು. ಬಹಿರಂಗಸಭೆಯೊಂದಿಗೆ ಜನ ಚದುರಿದರು.

ಮಧ್ಯಾಹ್ನ ಬೆಂಕಿನಗರ ಪ್ರದೇಶಕ್ಕೆ ಬಂದ ಅಧಿಕಾರಿಗಳು ಸ್ಥಳ ಸಮೀಕ್ಷೆ ನಡೆಸಿದರು. ಅಧಿಕಾರಿಗಳನ್ನು ಪ್ರದೇಶದ ಪ್ರತಿಯೊಂದು ಓಣಿಯನ್ನೂ, ಜನಗಳನ್ನೂ ಭೇಟಿ ಮಾಡಿಸಿದ ಪಕ್ಷದ ಕಾರ್ಯಕರ್ತರು ಕೊಳಚೆ ಪ್ರದೇಶಕ್ಕಿಂತ ಕಡೆಯಾಗುತ್ತಿರುವ ಪ್ರದೇಶದ ಅಗತ್ಯಗಳನ್ನು ಅಧಿಕಾರಿಗಳಿಗೆ ಮನವರಿಕೆ ಮಾಡಿದರು.

ನಂತರ ನಡೆದ ಮಾತುಕತೆಯಲ್ಲಿ ಕೂಡಲೇ ಪರಿಹಾರ ಕ್ರಮ ಕೈಗೊಳ್ಳಲು ಆದೇಶ ನೀಡಿರುವುದನ್ನು ತಹಸೀಲ್ದಾರರು ವಿವರಿಸಿ, ಒಂದು ವಾರದೊಳಗೆ ಕಾಯಂ ಪರಿಹಾರ ಒದಗಿಸಲು ಕ್ರಮ ಕೈಗೊಂಡಿದ್ದಾರೆ. ಕಾರ್ಯಕ್ರಮದ ನೇತೃತ್ವವನ್ನು ಕಾಂ. ಮಂದಾರಸಾಬ್, ಖಾಸಿಂಸಾಬ್, ನಜೀರ್‌ಖಾನ್, ಬಾಬು, ಹನುಮಂತಪ್ಪ, ಗುರುಬಸಪ್ಪ ಹಾಗೂ ಕಾಂ. ಇಕ್‌ಬಾಲ್ ಹುಸೇನ್ ವಹಿಸಿದ್ದರು.

ಈ ಮತಪ್ರದರ್ಶನಕ್ಕೆ ಮೊದಲು 11-10-81ರಂದು ಬೆಂಕಿನಗರ ಪ್ರದೇಶದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ○

## ಸಂತಾಪ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬಿಜಾಪುರ ಘಟಕದ ಮುಖಂಡರಾದ ವಿ. ಎಂ. ಸೊನ್ನದ ಅವರ ತಂದೆಯವರು ಅಕ್ಟೋಬರ್ 10ರಂದು ನಿಧನರಾಗಿದ್ದಾರೆ. ಕಾಂ. ಸೊನ್ನದ ಅವರ ತಂದೆಯ ಮರಣಕ್ಕಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಶೋಕ ವ್ಯಕ್ತಪಡಿಸುತ್ತದೆ. ●

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154
*EDITOR :* M. K. BHAT